ಸಂಪುಟ : 8 ಸಂಚಿಕೆ : 278 ಪುಟ : 4 ಬೆಲೆ : 3.00 ಶುಕ್ರವಾರ ಡಿಸೆಂಬರ್ 15, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 278 Pages : 4 Price : 3.00 Friday December 15, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಡಿಸೆಂಬರ್ 15 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 15, 16, 17 ಶಹಪುರ ಪೇಟೆ, ಡಿಸಿ ಮಿಲ್ ರೋಡ್, ಜವಳಗಲ್ಲಿ, ಶುದ್ಧ ನೀರಿನ ಘಟಕದ ಲೈನ್, ಮೀನಿನ ಮಾರ್ಕೆಟ್, ಹನುಮಂತ ದೇವರ ಗುಡಿ ಲೈನ್, ಮಹೇಂದ್ರಕರ್ ಸರ್ಕಲ್ ಲೈನ್, ಗಾಂಧಿ ಸರ್ಕಲ್ ರೋಡ್, ಭಜಂತ್ರಿ ಓಣಿ, ಪ್ರಕಾಶನವರ ಸಂಧಿ, ವಿಜಾಪುರದವರ ಲೈನ್, ನವಗ್ರಹ ಗುಡಿ ಲೈನ್, ಕಾಡಪ್ಪನವರ ಲೈನ್, ಗಡಾದವರ ಲೈನ್, ಕರ್ನಾಟಕ ಟಾಕೀಸ್ ಲೈನ್, ಅಂಗನವಾಡಿ ಲೈನ್, ಬಸವೇಶ್ವರ ಗುಡಿ ಲೈನ್, ಗಣೇಶ ಗುಡಿ.

ವಾರ್ಡ್ ನಂ. 30, 34 ವಡ್ಡರಗೇರಿ, ಕುಂಚಿ ಕೊರವರ ಓಣಿ, ಮೂರುಶಿಳ್ಳಿನ ವಕಾರ, ಡಿಪೋ ಹಿಂದಿನ ಭಾಗ 46 ಪ್ಲಾಟ್, ಹೂಗಾರ್ ಪ್ಲಾಟ್, ಬಸವೇಶ್ವರ ಶಾಲೆ ಹಿಂದಿನ ಮುಂದಿನ ಲೈನ್, ಶಿವಾನಂದ ಗಾರ್ಡನ್ 1 ನೇ ಕ್ರಾಸ್, ಮಸೂತಿ ಲೈನ್.

ವಾರ್ಡ್ ನಂ. 27 ಕೆಎಚ್ ಪಾಟೀಲ್ ಬಡಾವಣೆ, ವೀರನಾರಾಯಣ ಬಡಾವಣೆ, ಹಮಾಲರ ಪ್ಲಾಟ್. ವಾರ್ಡ್ ನಂ. 28 ಗೋಡಬೋಲೆ ಡಾಕ್ಟರ್ ಲೈನ್, ಶಿವನಗುತ್ತಿಯವರ ಲೈನ್. ವಾರ್ಡ್ ನಂ. 29 ಮಸೂತಿ ಲೈನ್ ಕೆಳಗಿನ ಭಾಗ ಮೇಲಿನ ಭಾಗ. ವಾರ್ಡ್ ನಂ. 11,12 ಕರಿಯಮ್ಮ ಕಲ್ಲು, ಮಾರುತಿ ದೇವಸ್ಥಾನದ ಲೈನ್, ಇರಾನಿ ಕಾಲೋನಿ, ಹಳೆ ಪೋಸ್ಟ್ ಆಫೀಸ್ ಲೈನ್, ವಿವೇಕಾನಂದ ಗಾರ್ಡನ್ ಲೈನ್, ಗಣೇಶಗುಡಿ ಲೈನ್. ವಾರ್ಡ್ ನಂ. 12,13 ಆನಂದ ಸರ್ಕಲ್ ಲೈನ್, ಉಪ್ಪಿನವರ ಲೈನ್, ಹಾದಿಮನಿಯವರ ಲೈನ್, ಕಿರೆಸೂರವರ ಲೈನ್, ಅಗಸರ ಲೈನ್, ಸುರಪೂರದವರ ಲೈನ್, ಜಾಧವ ಲೈನ್ ಮೂರನೇ ಕ್ರಾಸ್, ಗಣಪತಿ ಗುಡಿ, ಈದಗಾ ಕಾಂಪ್ಲೆಕ್ಸ್ ಲೈನ್.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ಅವುಗಳನ್ನು ದೃಶ್ಯ ಮಾಧ್ಯಮ ಹಾಗೂ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಕರವನ್ನು ಸಂದಾಯ ಮಾಡಿ ಸಹಕರಿಸಲು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾರಿಗೆ ಇಲಾಖೆಗೆ ಶೀಘ್ರವೇ 5500 ಹೊಸ ಬಸ್, 9 ಸಾವಿರ ಸಿಬ್ಬಂದಿ ನೇಮಕ

■ ವಿಜಯಸಾಕ್ಷಿ ಸುದ್ದಿ, ಬೆಳಗಾವಿ

ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿನ ಬಸ್ ಹಾಗೂ ಸಿಬ್ಬಂದಿಗಳ ಕೊರತೆಯನ್ನು ಸಚಿವ ರಾಮಲಿಂಗಾ ರೆಡ್ಡಿಯವರು ಒಪ್ಪಿಕೊಂಡಿದ್ದು, ಸಮಸ್ಯೆ ಬಗೆಹರಿಸಲು ಶೀಘ್ರದಲ್ಲೇ 5,500 ಹೊಸ ಬಸ್ ಖರೀದೀರಿ, 9,000 ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವುದಾಗಿ ಬುಧವಾರ ಹೇಳಿದರು.

ವಿಧಾನಪರಿಷತ್ತಿನಲ್ಲಿ ಪ್ರಶ್ನೋತ್ತರ ವೇಳೆ ಮಾತನಾಡಿದ ಸಚಿವರು, 2024ರ ಫೆಬ್ರವರಿ ಅಂತ್ಯದ ವೇಳೆಗೆ ಹೊಸ ಬಸ್‌ಗಳ ಸೇರ್ಪಡೆ, ಸಿಬ್ಬಂದಿ ನೇಮಕಾತಿ ಕಾರ್ಯ ಅಂತಿಮಗೊಳ್ಳಲಿದ್ದು, ಬಸ್‌ಗಳ ಕೊರತೆ ಬಹುತೇಕ ಕಡಿಮೆಯಾಗಲಿದೆ. ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಸಂಖ್ಯೆಗೆ ತಕ್ಕಂತೆ ಸೌಕರ್ಯಗಳನ್ನು ಹೆಚ್ಚಿಸಲಾಗುತ್ತದೆ ಎಂದು ಹೇಳಿದರು. ಶಕ್ತಿ ಯೋಜನೆ ಜಾರಿಯಾದ ನಂತರ ರಾಜ್ಯದಲ್ಲಿ 80 ಲಕ್ಷ ಇದ್ದ ಪ್ರಯಾಣಿಕರ ಸಂಖ್ಯೆ 1 ಕೋಟಿಗೆ ತಲುಪಿದೆ. ಆದರೆ, ಅದಕ್ಕೆ ತಕ್ಕಂತೆ ಬಸ್ ಗಳು ಇಲ್ಲ. ಹಿಂದೆ ನಾನೇ ಸಾರಿಗೆ ಸಚಿವ ಆಗಿದ್ದಾಗ ರಾಜ್ಯದ ನಾಲ್ಕೂ ನಿಗಮಗಳಿಂದ 24 ಸಾವಿರ ಬಸ್ ಇತ್ತು. ಆದರೆ, ಈಗ ಅದು 23 ಸಾವಿರಕ್ಕೆ ಇಳಿದಿದೆ. ಹೊಸದಾಗಿ ಬಸ್ ಖರೀದಿಯೇ ಮಾಡಿಲ್ಲ. ನೇಮಕಾತಿ ವಿಚಾರದಲ್ಲಿಯೂ ಪ್ರಗತಿ ಆಗಿಲ್ಲ. 13,888 ಜನ ನಿವೃತ್ತಿಯಾಗಿದ್ದರೂ ನೇಮಕಾತಿ ಆಗಿಲ್ಲ. ಈಗ ನಾವು 9 ಸಾವಿರ ಸಿಬ್ಬಂದಿ ನೇಮಕ ಮಾಡುತ್ತಿದ್ದೇವೆ ಎಂದು ತಿಳಿಸಿದರು,

### ಜಿಲ್ಲಾಧಿಕಾರಿಗಳಿಂದ ಗಜೇಂದ್ರಗಡದಲ್ಲಿ ಜನತಾ ದರ್ಶನ । 129 ಅಹವಾಲು ಸ್ವೀಕೃತ

# ಸ್ಥಳದಲ್ಲೇ 118 ಅರ್ಜಿಗಳ ವಿಲೇವಾರಿ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ಪುರಸಭೆ ಸಭಾಭವನದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ತಾಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ 129 ಅರ್ಜಿಗಳಲ್ಲಿ 118 ಅರ್ಜಿಗಳನ್ನು ಸ್ಥಳದಲ್ಲೇ ವಿಲೇವಾರಿ ಮಾಡಲಾಯಿತು.

ಸಾರ್ವಜನಿಕರ ಅಹವಾಲು ಆಲಿಸಲು ಜಿಲ್ಲಾಧಿಕಾರಿಗಳು ಮುಂದಾಗುತ್ತಿದ್ದಂತೆ, ಕಳಕಾಪೂರ ಗ್ರಾಮಕ್ಕೆ ಬಸ್ ಸೌಲಭ್ಯ, ವಿದ್ಯಾಭ್ಯಾಸಕ್ಕಾಗಿ ಹಾಗೂ ಉದ್ಯೋಗಕ್ಕಾಗಿ ಕಂಪ್ಯೂಟರ್ ನೀಡಿ ಎನ್ನುವ ಬೇಡಿಕೆಗಳ ಜತೆಗೆ ಪಿಂಚಣಿ, ವಿದ್ಯುತ್ ಸಮಸ್ಯೆ, ನೀರಿನ ಸಮಸ್ಯೆ ಸೇರಿ 129 ಅರ್ಜಿಗಳು ಸಲ್ಲಿಕೆಯಾದವು.

ಜನತಾ ದರ್ಶನ ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲೆ ನಂ.2 ಹಾಗೂ 3ರಲ್ಲಿ ಶೌಚಾಲಯ, ಗೇಟ್ ಹಾಗೂ ನೀರಿನ ಸೌಲಭ್ಯ ಕಲ್ಪಿಸುವಂತೆ ಶಾಲಾ ಶಿಕ್ಷಕಿಯರು




ಹಾಗೂ ಎಸ್‌ಡಿಎಂಸಿ ಸದಸ್ಯರು ಮನವಿ ನೀಡಿದಾಗ, ಸಂಬಂಧಿಸಿದ ಇಲಾಖೆಗಳ ಮೂಲಕ ಪರಿಹಾರ ಕಂಡುಕೊಳ್ಳುವಂತೆ ಬಿಇಒ ಅವರಿಗೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಸೂಚಿಸಿದರು. ಉಣಚಗೇರಿ ಗ್ರಾಮದಲ್ಲಿ ಕೋಳಿ ಫಾರ್ಮ್‌ನಿಂದ ಆಗುತ್ತಿರುವ ತೊಂದರೆಗಳ ಕುರಿತು ಗ್ರಾಮಸ್ಥರು ದೂರು ಸಲ್ಲಿಸಿದರು. ವಾರದೊಳಗೆ ಕೋಳಿ ಫಾರ್ಮ್ ಬಂದ್ ಮಾಡಲು ಸೂಚಿಸಿದರಲ್ಲದೆ, ಕಿರಾಣಿ ಅಂಗಡಿಗಳಲ್ಲಿ ಟೇಸ್ಟಿಂಗ್ ಪೌಡರ್ ಮಾರಾಟದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಪಟ್ಟಣದಲ್ಲಿ ಪುರಸಭೆ ಆಡಳಿತ ಮಂಡಳಿ ಇಲ್ಲದ ಪರಿಣಾಮ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಅದರಲ್ಲೂ ಮಹಿಳಾ ಶೌಚಾಲಯಗಳ ನಿರ್ವಹಣೆ ಕೊರತೆಯಿಂದ ಬಯಲು ಬಹಿರ್ದೆಸೆ ಇನ್ನೂ ಜೀವಂತವಾಗಿದೆ. ರಸ್ತೆಯಲ್ಲಿ ಕೊಳಚೆ ನೀರು ಹರಿಯುತ್ತಿದ್ದರೂ ಸಹ ಅಧಿಕಾರಿಗಳು ಮೌನಕ್ಕೆ ಶರಣಾಗಿದ್ದಾರೆ ಎಂದು ಪುರಸಭೆ ಸದಸ್ಯ ವಾಯ್.ಬಿ. ತಿಕರೋಜಿ ದೂರಿದರು. ಪುರಸಭೆಯಲ್ಲಿ ಅಧಿಕಾರಿಗಳ ಕೊರತೆಯಿದ್ದು, ಪುರಸಭೆಯ ಅಭಿಯಂತರರು ಜಿಲ್ಲೆಯ ನಾಲ್ಕು ಕಚೇರಿಗಳನ್ನು ಸುತ್ತು ಹಾಕುತ್ತಿದ್ದಾರೆ. ಹೀಗಾಗಿ, ಪುರಸಭೆಗೆ ಖಾಯಂ ಅಭಿಯಂತರರನ್ನು ನೇಮಿಸಿ ಎಂದು ಪುರಸಭೆ ಹಂಗಾಮಿ ಅಧ್ಯಕ್ಷ ವೀರಪ್ಪ ಪಟ್ಟಣಶೆಟ್ಟಿ ಆಡಳಿತವನ್ನು ಒತ್ತಾಯಿಸಿದರು.

ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ, ತಾ.ಪಂ ಇಒ ಡಾ. ಡಿ.ಮೋಹನ್, ಸಿಪಿಐ ಸುನೀಲ್ ಬೀಳಗಿ, ಪುರಸಭೆ ಪ್ರಭಾರ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ, ವಿರೂಪಾಕ್ಷಯ್ಯ ಚೌಕಿಮಠ, ರುದ್ರಪ್ಪ ಹುರಳಿ, ವೀರೇಶ ರಾಜೂರ, ಅಹ್ಮದಅಲಿ ನಧಾಪ, ಮಂಜುನಾಥ ತಳ್ಳಿಹಾಳ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

> ಸಾರ್ವಜನಿಕರು ಹಲವು ವಿಧದ ಸಮಸ್ಯೆಗಳನ್ನು ಪರಿಹರಿಸುವಂತೆ ಜಿಲ್ಲಾಧಿಕಾರಿಗಳಲ್ಲಿ ತಮ್ಮ ಅಳಲು ತೋಡಿಕೊಂಡರು. ಸ್ಥಳೀಯ ಕಚೇರಿಗೆ ಅಲೆದು ಸುಸ್ತಾಗಿದ್ದೇನೆ, ಇಂದು ಪುರಸಭೆಗೆ ನೀವು ಬಂದಿರುವುದು ನಮ್ಮ ಸೌಭಾಗ್ಯ. ದಯಮಾಡಿ ನಮ್ಮ ಹೊಲದ ಸಮಸ್ಯೆಗೆ ಪರಿಹಾರ ನೀಡಬೇಕು ಎಂದು ಓರ್ವರು ಅಹವಾಲು ತೋಡಿಕೊಂಡರೆ, ಉತಾರದಲ್ಲಿ ತಂದೆಯವರ ಹೆಸರಿಲ್ಲದ್ದರಿಂದ ಅವರ ಮಗಳಾದ ನನ್ನ ಹೆಸರು ಸಹ ಇಲ್ಲ. ಅದಕ್ಕೆ ಪರಿಹಾರ ಒದಗಿಸುವಂತೆ, ಗೃಹಲಕ್ಷ್ಮೀ ಹಾಗೂ ಪಡಿತರ ಹಣ ನನ್ನ ಖಾತೆಗೆ ಜಮೆ ಮಾಡಿಸಿ ಎಂದು, ಬಡಾವಣೆಯಲ್ಲಿ ರಸ್ತೆ ಕಾಮಗಾರಿ ಆರಂಭಿಸಿ 6 ತಿಂಗಳು ಗತಿಸಿದ್ದರೂ ಸಹ ಕಾಮಗಾರಿ ಪೂರ್ಣಗೊಂಡಿಲ್ಲ, ಒಂದು ಮನೆ ಒದಗಿಸಿ ಪುಣ್ಯ ಕಟ್ಟಿಕೊಳ್ಳಿ ಎಂಬ ಮನವಿಗಳೂ ಸಲ್ಲಿಕೆಯಾದವು.

## ದೇವಾಲಯದ ಆಭರಣ ಕಳ್ಳರ ಬಂಧನ



■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ನ.29ರಂದು ತಾಲೂಕಿನ ಶ್ರೀ ಹೊಳಲಮ್ಮದೇವಿ ದೇವಸ್ಥಾನದಲ್ಲಿ ಬೆಳ್ಳಿ, ಬಂಗಾರದ ಆಭರಣಗಳ ಕಳ್ಳತನ ನಡೆದಿತ್ತು. ಈ ಸಂಬಂಧ, ಆರೋಪಿತರ ಪತ್ತೆಗಾಗಿ ಎಸ್‌ಪಿ ಮತ್ತು ಡಿಎಸ್‌ಪಿ ಮಾರ್ಗದರ್ಶನದಲ್ಲಿ ಶಿರಹಟ್ಟಿ ಪೊಲೀಸರ ತಂಡವು, ಈ ಕಳ್ಳತನದಲ್ಲಿ ಭಾಗಿಯಾಗಿದ್ದ ಜಿಲಾನಿ ಜಾತಗಾರ, ಖಾಜಾ ಬೇಪಾರಿ ಎಂಬ ಆರೋಪಿತರನ್ನು ಗುರುವಾರ ಬಂಧಿಸಿದ್ದಾರೆ.

ಆರೋಪಿತರು ಶ್ರೀ ಹೊಳಲಮ್ಮದೇವಿ ದೇವಸ್ಥಾನದ ಬೆಳ್ಳಿ ಮತ್ತು ಬಂಗಾರದ ಆಭರಣಗಳು, ತೊಳಲಿ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಹುಂಡಿಯನ್ನು ಕಳ್ಳತನ ಮಾಡಿರುವುದಲ್ಲದೆ ಕದಂಪೂರ ಗ್ರಾಮದಲ್ಲಿ ದ್ವಿಚಕ್ರ ವಾಹನವನ್ನು ಕಳ್ಳತನ ಮಾಡಿದ್ದು, ಆರೋಪಿತರಿಂದ ಅಂದಾಜು 2.45ಲಕ್ಷ ರೂ. ಕಿಮ್ಮತ್ತಿನ ಸಾಮಗ್ರಿಗಳನ್ನು ವಶಪಡಿಸಿಕೊಂಡಿದ್ದಾರೆ.

ಕಾರ್ಯಚರಣೆಯ ತಂಡದಲ್ಲಿ ಸಿಪಿಐ ನಾಗರಾಜ ಮಾಡಳ್ಳಿ, ಪಿಎಸ್‌ಐ ಈರಪ್ಪ ರಿತ್ತಿ, ವಿಜಯಕುಮಾರ ತಳವಾರ, ಸಿಬ್ಬಂದಿಗಳಾದ ಜಿ.ಎಂ. ಬೂದಿಹಾಳ, ಆನಂದ ಸಿಂಗ್, ಚಂದ್ರು ದೊಡ್ಡಮನಿ, ಪರಶುರಾಮ ದೊಡ್ಡಮನಿ, ಜೆ.ಐ. ಬಚ್ಚೇರಿ, ಸಂಜು ಕೊರಡೂರ, ಡಿ.ಎಸ್. ನದಾಫ್, ಗಣೇಶ ಗ್ರಾಮಪುರೋಹಿತ, ರಾಜು ಯರಗಟ್ಟಿ, ಆನಂದ ಕಮ್ಮಾರ, ಹನಮಂತ ದೊಡ್ಡಮನಿ, ಸೋಮು ರಾಮಗಿರಿ, ಆರ್.ಎಚ್. ಮುಲ್ಲಾ, ಲಕ್ಷ್ಮಣ ಲಮಾಣಿ, ಠಾಕೂ ಕಾರಭಾರಿ, ರಮೇಶ ಜಮಾಣಿ, ಕುಶಾಲ ಬಣಕಾರ, ಹನುಮರಡ್ಡಿ ತಾರೀಕೊಪ್ಪ, ಮಹಾದೇವ ಲಮಾಣಿ, ಚರಂಡ ಗುಂಡೂರಮಠ, ರಾಜೇಶ ವಿರಾಪೂರ, ಮಂಜುನಾಥ ಪಿರಂಗಿ, ಸಂಗರಡ್ಡಿ ಕಪ್ಪತ್ತನವರ, ಎಚ್.ಜಿ. ಲಕ್ಷ್ಮೇಶ್ವರ ಇದ್ದರು.

## ಜಲದುರ್ಗ ಕೋಟೆ ಸಂರಕ್ಷಣೆಗೆ ಪ್ರಸ್ತಾವನೆ ಬಂದಲ್ಲಿ ಅನುದಾನ

■ ವಿಜಯಸಾಕ್ಷಿ ಸುದ್ದಿ, ಬೆಳಗಾವಿ–ಸುವರ್ಣಸೌಧ

ರಾಯಚೂರು ಜಿಲ್ಲೆಯ ಐತಿಹಾಸಿಕ ಜಲದುರ್ಗ ಕೋಟೆಗೆ ಯಾವುದೇ ಅನುದಾನ ನಿಗದಿಪಡಿಸಿಲ್ಲ. ಜಲದುರ್ಗ ಐತಿಹಾಸಿಕ ಕೋಟೆಯ ಸಂರಕ್ಷಣೆ, ಜೀರ್ಣೋದ್ಧಾರಕ್ಕೆ ಪ್ರಸ್ತಾವನೆ ಸ್ವೀಕೃತಗೊಂಡಲ್ಲಿ ವಿಸ್ತೃತ ಯೋಜನಾ ವರದಿಯೊಂದಿಗೆ ಅನುದಾನದ ಲಭ್ಯತೆಗೆ ಅನುಗುಣವಾಗಿ ನಿಯಮಾನುಸಾರ ಪರಿಶೀಲಿಸಲಾಗುವುದು ಎಂದು ಕಾನೂನು ನ್ಯಾಯ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಾದ ಹೆಚ್.ಕೆ. ಪಾಟೀಲ ಅವರು ವಿಧಾನ ಪರಿಷತ್‌ನಲ್ಲಿ ಹೇಳಿದರು.

ಸದಸ್ಯರಾದ ಶರಣಗೌಡ ಬಯ್ಯಾಪುರ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, 2013–14ನೇ ಸಾಲಿನ 13ನೇ ಹಣಕಾಸಿನ ಯೋಜನೆಯಡಿ ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಐತಿಹಾಸಿಕ ಮುದಗಲ್ ಕೋಟೆಯ ಸಂರಕ್ಷಣಾ ಕಾಮಗಾರಿಯನ್ನು 50 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಕೋಟೆಯ ಗೋಡೆಯ ಸಂರಕ್ಷಣಾ ಕಾಮಗಾರಿ ಹಾಗೂ ಕಾಂಕ್ರಿಟ್ ಚೈನ್‌ಲಿಂಕ್ ಫೆನ್ಸಿಂಗ್ ಕಾಮಗಾರಿಗಳ ಕೆಲಸ



ಪೂರ್ಣಗೊಂಡಿದೆ. ಅದರಂತೆ ಜಲದುರ್ಗ ಐತಿಹಾಸಿಕ ಕೋಟೆಯ ಸಂರಕ್ಷಣೆ ಜೀರ್ಣೋದ್ಧಾರಕ್ಕೆ ಪ್ರಸ್ತಾವನೆ ಸ್ವೀಕೃತಗೊಂಡಲ್ಲಿ ನಿಯಮಾನುಸಾರ ಪರಿಶೀಲಿಸಲಾಗುವುದು ಎಂದು ಸಚಿವರು ಉತ್ತರಿಸಿದರು.

### ತಾಲೂಕು ಮಟ್ಟದ ಜನಜಾಗೃತಿ, ವಾಲ್ಮೀಕಿ ಜಾತ್ರೆ ಕುರಿತ ಪುರ್ವಭಾವಿ ಸಭೆ

# ನಕಲಿ ಜಾತಿ ಪ್ರಮಾಣಪತ್ರ ತಡೆಗಟ್ಟಲು ಸೂಕ್ತ ಕ್ರಮಕ್ಕೆ ಆಗ್ರಹ

■ ವಿಜಯಸಾಕ್ಷಿ ಸುದ್ದಿ, ಗದಗ

ಹರಿಹರ ತಾಲೂಕಿನ ರಾಜನಹಳ್ಳಿಯಲ್ಲಿ ಫೆ. 8ಮತ್ತು 9ರಂದು ಜರುಗಲಿರುವ ಮಹರ್ಷಿ ವಾಲ್ಮೀಕಿ ಜಾತ್ರೆಯ ಮೂಲಕ ಸಮುದಾಯವನ್ನು ಸದಾ ಜಾಗೃತಗೊಳಿಸಬೇಕು ಹಾಗೂ ಮಹರ್ಷಿ ವಾಲ್ಮೀಕಿಯವರ ಮಾನವೀಯ ಮೌಲ್ಯಗಳನ್ನು, ಚಿಂತನೆಗಳನ್ನು ನಾಡಿನ ಜನತೆಗೆ ತಿಳಿಸುವುದರ ಜೊತೆಗೆ ಸಮುದಾಯವನ್ನು ಸದೃಢಗೊಳಿಸಬೇಕು ಎಂದು ಪೂಜ್ಯ ಶ್ರೀ.ಪ್ರಸನ್ನಾನಂದಪುರಿ ಮಹಾಸ್ವಾಮೀಜಿ ಹೇಳಿದರು.

ಅವರು ಗದಗ ನಗರದ ಮಹರ್ಷಿ ವಾಲ್ಮೀಕಿ ಸಭಾಭವನದಲ್ಲಿ ಹಮ್ಮಿಕೊಂಡ ಗದಗ ಜಿಲ್ಲಾ ಹಾಗೂ ತಾಲೂಕು ಮಟ್ಟದ ಜನಜಾಗೃತಿ ಹಾಗೂ ವಾಲ್ಮೀಕಿ ಜಾತ್ರೆ ಕುರಿತ ಪುರ್ವಭಾವಿ ಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಪರಿಶಿಷ್ಠ ಪಂಗಡವಲ್ಲದ ಜಾತಿಗಳು ನಾಯಕ ಮತ್ತು



ತಳವಾರ ಜಾತಿಯ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣಪತ್ರ ಪಡೆದುಕೊಂಡು ನಿಜವಾದ ಪರಿಶಿಷ್ಠ ಪಂಗಡದ ಜನರಿಗೆ ಅನ್ಯಾಯವೆಸಗುತ್ತಿದ್ದಾರೆ. ನಕಲಿ ಜಾತಿ ಪ್ರಮಾಣಪತ್ರ ಪಡೆಯುವುದಕ್ಕೆ ಕಡಿವಾಣ ಹಾಕುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ರಾಜ್ಯ ಸರಕಾರಕ್ಕೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ವಾಲ್ಮೀಕಿ ನಾಯಕ ಸೇವಾ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಬೆಳಧಡಿ, ವಾಲ್ಮೀಕಿ ನಾಯಕ ಸಮಾಜದ ಯುವ ಘಟಕದ ಗದಗ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಸಿದ್ದಮ್ಮನಹಳ್ಳಿ, ವಾಲ್ಮೀಕಿ ಜಾತ್ರಾ ಸಮಿತಿ ಸದಸ್ಯರಾದ ಬಸವರಾಜ್ ಮುಂದಿಮನಿ, ಶಿವು ಯಲ್ಲಿಶೆಟ್ಟರ್, ಫಕೀರಪ್ಪ ಮರುಡೂರು, ಮುತ್ತುರಾಜ್ ತಳವಾರ್, ಪ್ರವೀಣ್ ಜಾಲಕ್ಕನವರ್, ಚಂದ್ರು ಚಿಕ್ಕಅಗಸಿ, ಸಂತೋಷ ತಳವಾರ, ರಾಮ ಬಾಗಲಕೋಟಿ, ರಾಘು ನಾಯಕ ಇದ್ದರು. ಇದೇ ಸಂದರ್ಭದಲ್ಲಿ ವಿ.ಎಸ್.ಎಸ್ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

### ಅತಿಥಿ ಉಪನ್ಯಾಸಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಎಸ್‌ಎಫ್‌ಐ ಆಗ್ರಹ

# ನ್ಯಾಯಯುತ ಬೇಡಿಕೆಗಳನ್ನು ಶೀಘ್ರವೇ ಬಗೆಹರಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನವೆಂಬರ್ 23ರಿಂದ ತರಗತಿಗಳನ್ನು ಬಹಿಷ್ಕರಿಸಿ ಹೋರಾಟ ನಡೆಸುತ್ತಿದ್ದಾರೆ. ಅತಿಥಿ ಉಪನ್ಯಾಸಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಗದಗ ಜಿಲ್ಲಾ ಸಮಿತಿಯು ಒತ್ತಾಯಿಸಿದೆ.

ರಾಜ್ಯ ಪದಾಧಿಕಾರಿ ಗಣೇಶ ರಾಠೋಡ್ ಮಾತನಾಡಿ, ಗ್ರಾಮೀಣ ಭಾಗದಿಂದ ಸಾವಿರಾರು ವಿದ್ಯಾರ್ಥಿಗಳು ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಯನ ನಡೆಸಲು ಬರುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಪಾಠ ಮಾಡಲು ಇಲ್ಲಿ ಅತಿಥಿ ಉಪನ್ಯಾಸಕರೇ ಇಲ್ಲ. ಕಳೆದ 22 ದಿನಗಳಿಂದ ಹೋರಾಟ ನಡೆಸುತ್ತಿರುವ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದರು.




ಜಿಲ್ಲಾ ಮುಖಂಡ ಚಂದ್ರು ರಾಠೋಡ ಮಾತನಾಡಿ, ಈ ಅವ್ಯವಸ್ಥೆಯಿಂದ ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಸಮಸ್ಯೆಯಾಗುತ್ತಿದೆ. ಈ ಸಮಸ್ಯೆಯನ್ನು ದೂರ ಮಾಡುವುದಕ್ಕೆ ಎಲ್ಲಾ ಸರ್ಕಾರಿ ಕಾಲೇಜುಗಳಿಗೆ ಖಾಯಂ ಉಪನ್ಯಾಸಕರ ಅಗತ್ಯವಿದೆ ಎಂದರು.

ಅತಿಥಿ ಉಪನ್ಯಾಸಕರಾದ ನಾರಾಯಣ ಗೌಡ ಮಾತನಾಡಿ, ರಾಜ್ಯದ ಅತಿಥಿ ಉಪನ್ಯಾಸಕರ ಪರವಾಗಿ ನೀತಿ–ನಿಯಮಾವಳಿಗಳನ್ನು ರೂಪಿಸಿ ಸೇವಾ ಭದ್ರತೆ ಒದಗಿಸಿ ಸಕಾಲಕ್ಕೆ ವೇತನವನ್ನು ನೀಡಿ ಅವರ ನ್ಯಾಯಯುತ ಬೇಡಿಕೆಗಳನ್ನು ಶೀಘ್ರವೇ ಬಗೆಹರಿಸಲು ಮುಂದಾಗಬೇಕೆಂದು ಆಗ್ರಹಿಸಿದರು.

ವಿದ್ಯಾರ್ಥಿ ಮುಖಂಡರಾದ ಕಾವ್ಯ ಪಾಟೀಲ, ಸುಮಾ, ಮಧು, ನೇತ್ರಾ ಮುಂತಾದವರು ಮಾತನಾಡಿದರು. ಹೋರಾಟದ ಸ್ಥಳಕ್ಕೆ ತಹಸೀಲ್ದಾರರು ಆಗಮಿಸಿ, ಮನವಿ ಸ್ವೀಕರಿಸಿ, ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ತಲುಪಿಸಲಾಗುವುದು ಎಂದು ಭರವಸೆ ನೀಡಿದರು.

ಹೋರಾಟದಲ್ಲಿ ವಿದ್ಯಾರ್ಥಿ ಮುಖಂಡರಾದ ನೇಹಾ, ಪಲ್ಲವಿ, ಸುಜಾತಾ, ಶೈಲಾ, ಮಂಜುಳಾ, ವೀಣಾ, ಭಾರತಿ, ನೇತ್ರಾ, ಮೇಘಾ, ರಕ್ಷಿತಾ, ತನುಜಾ, ವಿಜಯಲಕ್ಷ್ಮೀ, ಆರತಿ, ಶ್ರವಾಣ, ಚಂದಾಭಿ, ಅತಿಥಿ ಉಪನ್ಯಾಸಕರಾದ ಡಾ. ಎಸ್.ಎಸ್. ಸರ್ವಿ, ಡಾ. ವಿ.ಡಿ. ಮುಳಗುಂದ, ನಾರಾಯಣ ಕರ್ಲವಾಡ ಮುಂತಾದವರಿದ್ದರು.

## ಕಾಂಗ್ರೆಸ್ ಸರ್ಕಾರದ ಐದನೇ ಗ್ಯಾರಂಟಿ 'ಯುವ ನಿಧಿ' ಯೋಜನೆ ಜನವರಿ 1 ರಿಂದ ಜಾರಿ




**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಪದವೀಧರರಿಗೆ 3 ಸಾವಿರ ರೂಪಾಯಿ ಮತ್ತು ಡಿಪ್ಲೊಮಾ ಮಾಡಿದ ನಿರುದ್ಯೋಗಿ ಯುವಕರಿಗೆ ಪ್ರತಿ ತಿಂಗಳು 1500 ಭತ್ಯೆ ನೀಡುವ ರಾಜ್ಯ ಕಾಂಗ್ರೆಸ್ ಸರ್ಕಾರದ ಐದನೇ ಗ್ಯಾರಂಟಿ 'ಯುವ ನಿಧಿ' ಯೋಜನೆ ಹೊಸ ವರ್ಷದಿಂದಲೇ ಜಾರಿಗೆ ಬರಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಘೋಷಿಸಿದ್ದಾರೆ.

ಈ ಮುಂಚೆ ಡಿಸೆಂಬರ್ 26 ರಿಂದ 'ಯುವ ನಿಧಿ' ನೋಂದಣಿ ಪ್ರಾರಂಭವಾಗಲಿದೆ ಎಂದು ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅವರು ಹೇಳಿದ್ದರು.

ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಯೋಜನೆಯು ಜನವರಿ 1, 2024 ರಿಂದ ಜಾರಿಗೆ ಬರಲಿದೆ ಮತ್ತು ಅರ್ಜಿದಾರರು 'ಸೇವಾ ಸಿಂಧು' ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

2022–23ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪದವಿ ಪಡೆದು ಆರು ತಿಂಗಳು ಪೂರೈಸಿದವರು ಮತ್ತು ಉನ್ನತ ಶಿಕ್ಷಣ ಅಥವಾ ಯಾವುದೇ ಉದ್ಯೋಗಕ್ಕೆ ಸೇರದೇ ಇರುವವರು ಅರ್ಜಿ ಸಲ್ಲಿಸಲು ಅರ್ಹರು ಎಂದು ಮುಖ್ಯಮಂತ್ರಿಗಳು ಸಾಮಾಜಿಕ ಮಾಧ್ಯಮ 'ಎಕ್ಸ್' ನಲ್ಲಿ ಪೋಸ್ಟ್ ಮಾಡಿದ್ದಾರೆ.

ಈ ಯೋಜನೆಯಡಿ ನಿರುದ್ಯೋಗಿ ಪದವೀಧರರಿಗೆ ಮಾಸಿಕ 3,000 ರೂ. ಮತ್ತು ಡಿಪ್ಲೊಮಾ ಮಾಡಿದ ನಿರುದ್ಯೋಗಿಗಳಿಗೆ 1,500 ರೂ. ನೀಡಲಾಗುತ್ತದೆ. ಉದ್ಯೋಗ ಸಿಗುವವರೆಗೆ ಅಥವಾ ಎರಡು ವರ್ಷ ಅವಧಿಯಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಈ ಹಣವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತದೆ.

ಈ ವರ್ಷದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಐದು ಗ್ಯಾರಂಟಿಗಳನ್ನು ಘೋಷಿಸಿತ್ತು ಮತ್ತು ಅದರಲ್ಲಿ 'ಯುವ ನಿಧಿ' ಕೂಡ ಒಂದಾಗಿದೆ.

## ಹೊಸ ತಾಲ್ಲೂಕು ಕೇಂದ್ರ ಆಸ್ಪತ್ರೆಗಳು ಮೇಲ್ದರ್ಜೆಗೆ: ಸಚಿವ ದಿನೇಶ್ ಗುಂಡೂರಾವ್

**■ವಿಜಯಸಾಕ್ಷಿ ಸುದ್ದಿ, ಬೆಳಗಾವಿ**



ರಾಜ್ಯದಲ್ಲಿ ಘೋಷಣೆಯಾಗಿರುವ ಹೊಸ ತಾಲ್ಲೂಕು ಕೇಂದ್ರ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲು ಮುಖ್ಯಮಂತ್ರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ವಿಧಾನಸಭೆಯಲ್ಲಿಂದು ಹೇಳಿದರು.


ಪ್ರಶ್ನೋತ್ತರ ವೇಳೆಯಲ್ಲಿ ಸಚಿವರು, ಹೊಸದಾಗಿ ಘೋಷಣೆಯಾದ ತಾಲ್ಲೂಕು ಕೇಂದ್ರಗಳ ಬಹಳಷ್ಟು ಆಸ್ಪತ್ರೆಗಳು ತಾಲ್ಲೂಕು ಆಸ್ಪತ್ರೆಗಳಾಗಿ ಮೇಲ್ದರ್ಜೆಗೆ ಏರಿಯಾಗಿಲ್ಲ. ಇದರೊಂದಿಗೆ ರಾಜ್ಯದಲ್ಲಿ 160 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಹ ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೆ ಏರುವ ಅರ್ಹತೆ ಹೊಂದಿವೆ.

ಶಾಸಕರ ಬೇಡಿಕೆಗಳಿಗೆ ಸ್ಪಂದಿಸಿ ಹಣಕಾಸಿ ಲಭ್ಯತೆ ನೋಡಿಕೊಂಡು ಮೇಲ್ದರ್ಜೆಗೆ ಏರಿಸುವ ಕಾರ್ಯವನ್ನು ಹಂತ ಹಂತವಾಗಿ ಮಾಡಲಾಗುವುದು ಎಂದರು.

ದೇವದುರ್ಗ ಪಟ್ಟಣದಲ್ಲಿ ತಾಯಿ ಮಕ್ಕಳ ಆಸ್ಪತ್ರೆ: ಶಾಸಕಿ ಕೆ.ಕರೆಮ್ಮ ಅವರ ಮನವಿಗೆ ಸ್ಪಂದಿಸಿದ ಸಚಿವ ದಿನೇಶ್ ಗುಂಡೂರಾವ್, ಮುಂದಿನ ವರ್ಷದ ಆಯವ್ಯಯದಲ್ಲಿ ದೇವದುರ್ಗ ಪಟ್ಟಣದಲ್ಲಿ ಹೊಸದಾಗಿ ತಾಯಿ ಮಕ್ಕಳ ಆಸ್ಪತ್ರೆ ನಿರ್ಮಾಣಕ್ಕೆ ಅನುದಾನ ಒದಗಿಸುವ ಭರವಸೆ ನೀಡಿದರು. ಇದರೊಂದಿಗೆ ಗಬ್ಬೂರು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೆ ಏರಿಸುವುದಕ್ಕೂ ಸಮ್ಮತಿಸಿದರು.

### ವರ್ಷದ ಪ್ರಯತ್ನ ಮೂರು ಗಂಟೆಗಳಲ್ಲಿ ನಿರ್ಧರಿಸಲ್ಪಡುತ್ತದೆ

# ಪರೀಕ್ಷಾ ಸಿದ್ಧತೆ ಹೀಗಿರಲಿ



ಪರೀಕ್ಷೆಯ ದಿನಗಳು ನಿರೀಕ್ಷೆಯಂತೆಯೇ ಹತ್ತಿರವಾಗುತ್ತಿವೆ. ಪರೀಕ್ಷೆಗಾಗಿ ಯಾವುದೇ ರೀತಿಯ ಭಯ, ಆತಂಕ, ಗಲಿಬಿಲಿಗೊಳ್ಳದೆ ನಿರಾತಂಕವಾಗಿ ಎದುರಿಸಲು ಸನ್ನದ್ಧರಾಗಿ. ನೀವು ಪರೀಕ್ಷೆ ಬರೆಯುತ್ತಿರುವುದು ಇದೇ ಮೊದಲಲ್ಲ. ಹಾಗಾಗಿ ಪರೀಕ್ಷೆಗೆ ಭಯಪಡುವ ಅವಶ್ಯಕತೆಯಂತೂ ಇಲ್ಲ. ಆದರೂ ಬಹುತೇಕರ ಮನಸ್ಸಿನಲ್ಲಿ ಪರೀಕ್ಷೆಯ ಭಯ, ಒತ್ತಡ ಇದ್ದೇ ಇರುತ್ತದೆ. ಯಾವ ಪಾಠಗಳಲ್ಲಿ ಯಾವ ರೀತಿಯ ಪ್ರಶ್ನೆಗಳನ್ನು ಕೇಳಬಹುದು, ಪಾಠದ ಕೊನೆಯಲ್ಲಿರುವ ಪ್ರಶ್ನೆಗಳು ಬರುತ್ತವೆಯೋ, ನಡು ನಡುವೆ ಕೇಳುತ್ತಾರೋ, ಪ್ರಶ್ನೆಗಳು ಅನ್ವಯ ಮಾದರಿಯಲ್ಲಿರುತ್ತವೆಯೋ, ನೇರವಾಗಿರದೆ ಟ್ವಿಸ್ಟ್ ಮಾಡಿ ಕೇಳುತ್ತಾರೋ ಎಂಬ ಗೊಂದಲವಂತೂ ಸಹಜವಾಗಿಯೇ ಇರುತ್ತದೆ. ಪ್ರತಿ ಕಲಿಕಾಂಶಗಳನ್ನು ಕಂಠಪಾಠ ಮಾಡದೆ ಸ್ಪಷ್ಟವಾಗಿ ಅರ್ಥೈಸಿಕೊಂಡಿದ್ದರೆ ಯಾವುದೇ ರೀತಿಯ ಪ್ರಶ್ನೆಗಳನ್ನು ಕೇಳಿದರೂ ಸರಿಯಾಗಿ ಗ್ರಹಿಸಿಕೊಂಡು ಉತ್ತರ ಬರೆಯಬಹುದು.

ಹಳೆಯ ಪ್ರಶ್ನೆ ಪತ್ರಿಕೆಗಳ ಅವಲೋಕನ: ಹಳೆಯ ಪ್ರಶ್ನೆ ಪತ್ರಿಕೆಗಳು ಪರೀಕ್ಷಾರ್ಥಿಗಳಿಗೆ ದಿಕ್ಸೂಚಿಗಳಿದ್ದಂತೆ, ಉತ್ತಮ ಮಾರ್ಗದರ್ಶಿ ಕೈಪಿಡಿಗಳಂತೆ. ಯಾವುದೇ ಪರೀಕ್ಷೆಗಳಿರಲಿ ಆ ಪರೀಕ್ಷಾ ಸಿದ್ಧತೆಯ ಮೊದಲು ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಸಂಗ್ರಹಿಸಿಕೊಂಡು, ಸೂಕ್ಷ್ಮವಾಗಿ ಗಮನಿಸಬೇಕು. ಅಂದಾಗ ಯಾವ ಕಲಿಕಾಂಶಗಳಲ್ಲಿ ಯಾವ ರೀತಿಯ ಪ್ರಶ್ನೆಗಳನ್ನು ಕೇಳಿದ್ದಾರೆ, ಎಷ್ಟು ಅಂಕಗಳಿಗೆ ಕೇಳಿದ್ದಾರೆ, ಆ ಪ್ರಶ್ನೆಗಳಿಗೆ ನಾವು ಹೇಗೆ ಉತ್ತರಿಸಬಹುದು ಎನ್ನುವುದು ಮನದಟ್ಟಾಗುತ್ತದೆ. ಬಹಳಷ್ಟು ವಿದ್ಯಾರ್ಥಿಗಳು ಪರೀಕ್ಷೆಯ ಬಳಿಕ ನಿರೀಕ್ಷಿತ ಫಲಿತಾಂಶ ಪಡೆಯುವಲ್ಲಿ ವೈಫಲ್ಯ ಅನುಭವಿಸುತ್ತಿರುವುದು ಇದೇ ಕಾರಣಕ್ಕೆ.

ಸಮಯ ಪಾಲನೆ: ಪ್ರತಿ ಪರೀಕ್ಷೆಗೂ ನಿಗದಿತ ಸಮಯವಿರುವುದು ಗೊತ್ತೇ ಇದೆ. ಸೂಕ್ತ ಸಮಯಕ್ಕೆ ಉತ್ತರವನ್ನು ಬರೆದು ಮುಗಿಸಲು ಸಮಯಪ್ರಜ್ಞೆ ತುಂಬಾ ಅವಶ್ಯಕ. ಪ್ರಶ್ನೆವಾರು, ಅಂಕವಾರು ಸಮಯವನ್ನು ಹಂಚಿಕೆ ಮಾಡಿಕೊಂಡು ಉತ್ತರಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಯಾವ ಪ್ರಶ್ನೆಗೆ ಎಷ್ಟು ಉತ್ತರ ಅವಶ್ಯವೋ ಅಗತ್ಯಕ್ಕೆ ತಕ್ಕಷ್ಟು ಉತ್ತರ ನೀಡಬೇಕು. ಅಂದಾಗ ಸಮಯದ ಮಿತಿಯಲ್ಲಿ ಸಮರ್ಪಕವಾದ ಉತ್ತರ ಬರೆಯಲು ಸಾಧ್ಯವಾಗುತ್ತದೆ. ಒಂದು ಅಂಕದ ಪ್ರಶ್ನೆಗಳಿಗೆ ಎಷ್ಟು ಸಮಯ ಬೇಕು, ಎರಡು ಅಂಕದ ಪ್ರಶ್ನೆಗಳಿಗೆ ಸಮಯವೆಷ್ಟು ಬೇಕಾಗಬಹುದು ಎಂಬ ಪರಿಕಲ್ಪನೆ ಮನಸ್ಸಿನಲ್ಲಿದ್ದರೆ ನಿಗದಿತ ಸಮಯದಲ್ಲಿ ಎಲ್ಲಾ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಬಹುದು. ಇಲ್ಲವಾದರೆ ಸಮಯ ಸಾಕಾಗದೆ ಪ್ರಶ್ನೆಗಳಿಗೆ ಉತ್ತರಿಸದೆ ಬಿಟ್ಟುಬರುವ ಸಾಧ್ಯತೆಗಳು ಹೆಚ್ಚು.

ಪರೀಕ್ಷೆ ಬರೆಯುವ ವಿಧಾನ: ಕ್ರಮಬದ್ಧವಾದ ಓದು ಮತ್ತು ಬರೆಹ ರೂಢಿಸಿಕೊಂಡಿದ್ದರೆ ತುಂಬಾ ಒಳ್ಳೆಯದು. ಯಾವುದೇ ತರಹದ ಪ್ರಶ್ನೆಗಳು ಬಂದರೂ ಅನುಕ್ರಮವಾಗಿ ಬರೆದಷ್ಟು ಸೂಕ್ತ. ಈ ರೀತಿ ಉತ್ತರಿಸುವುದರಿಂದ ಮೌಲ್ಯಮಾಪಕರಿಗೆ ನಿಮ್ಮ ಮೇಲೆ ಉತ್ತಮವಾದ ಭರವಸೆ, ಆತ್ಮವಿಶ್ವಾಸ ಮೂಡುತ್ತದೆ. ಉತ್ತರಿಸುವಾಗ ಪ್ರಮುಖ ಅಂಶಗಳಿಗೆ ಅಡಿಗೆರೆ ಹಾಕಬೇಕು. ಆದಷ್ಟು ಕಾಟು ಮಾಡದೆ ಸ್ಫುಟವಾದ, ಸ್ಪಷ್ಟವಾದ ಉತ್ತರಗಳಿರಲಿ. ಉತ್ತರಗಳನ್ನು ಸುತ್ತಿ ಬಳಸಿ ಬರೆಯದೆ ನೇರವಾಗಿರಲಿ. ಯಾವ ಪ್ರಶ್ನೆಗೆ, ಎಷ್ಟು ಅಂಕಗಳಿಗೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿದು ಉತ್ತರಿಸಬೇಕು. ಅಂದರೆ ನಮ್ಮ ನಿರೀಕ್ಷಿತ ಅಂಕಗಳು ಲಭಿಸುತ್ತವೆ.

ನಿಖರ ಉತ್ತರಗಳೆಡೆಗೆ ಗಮನವಿರಲಿ: ಪುಟಗಟ್ಟಲೆ ಉತ್ತರ ಬರೆಯುವ ಬದಲು ಸ್ಫುಟವಾದ, ಸ್ಪಷ್ಟವಾದ, ನಿಖರವಾದ, ವಿಶ್ವಾಸನೀಯವಾದ ಉತ್ತರಗಳಿಗೆ ಮೊದಲ ಆದ್ಯತೆ ಇರಲಿ. ಉತ್ತರ ಪತ್ರಿಕೆಯ ಆರಂಭದ ಪುಟಗಳಲ್ಲಿ ಸರಿಯಾದ ಉತ್ತರಗಳಿಂದ ಕೂಡಿರಲಿ, ಬರೆವಣಿಗೆ ಅಂದವಾಗಿರಲಿ, ಬರೆಯುವ ವಿಧಾನ ಅಚ್ಚುಕಟ್ಟಾಗಿರಲಿ. ಎರಡನೇ ಹಂತದಲ್ಲಿ ಅರ್ಧಂಬರ್ಧ ಅಥವಾ ಅಸ್ಪಷ್ಟ ಗೊತ್ತಿರುವ ಉತ್ತರಗಳಿಗೆ ಆದ್ಯತೆಯಿರಲಿ, ಕೊನೆಯ ಹಂತದಲ್ಲಿ ನೀವು ಓದದೆ ಇರುವ ಪ್ರಶ್ನೆಗಳು ಬಂದಿದ್ದರೆ ಆ ಪಾಠಗಳಲ್ಲಿ ನೀವು ಓದಿದ ಪ್ರಮುಖ ಅಂಶಗಳನ್ನು ಬರೆಯಬೇಕು. ಯಾವುದೇ ಪ್ರಶ್ನೆಗಳನ್ನು ಉತ್ತರಿಸದೆ ಬಿಟ್ಟು ಬರಬಾರದು. ಉತ್ತರಿಸಿದ ಪ್ರಶ್ನೆಗಳಿಗೆ ಒಂದು ಸಣ್ಣ ಗುರುತು ಮಾಡಿಕೊಳ್ಳಬೇಕು. ಯಾಕೆಂದರೆ ಗಡಿಬಿಡಿಯಲ್ಲಿ ಆಮೇಲೆ ಉತ್ತರಿಸಿದರೆ ಆಯಿತೆಂದು ಬಿಟ್ಟು ಬರುವ ಸಂಭಾವ್ಯತೆ ಇರುತ್ತದೆ.

ಧನಾತ್ಮಕ ಚಿಂತನೆ, ಆರೋಗ್ಯ: ನಾನು ಎಲ್ಲವನ್ನೂ ಚೆನ್ನಾಗಿ ಓದಿದ್ದೇನೆ, ಅರ್ಥೈಸಿಕೊಂಡಿದ್ದೇನೆ, ಯಾವುದೇ ಪ್ರಶ್ನೆಗೂ ಉತ್ತರ ಬರೆಯಬಲ್ಲೆ, ಎಲ್ಲವೂ ತುಂಬಾ ಸುಲಭ ಎಂಬ ಸಕಾರಾತ್ಮಕ ಯೋಚನೆ ನಮ್ಮನ್ನು ಪರೀಕ್ಷೆಗೆ ಗಟ್ಟಿಗೊಳಿಸುತ್ತದೆ. ಪರೀಕ್ಷೆಯನ್ನು ಒಂದು ಹಬ್ಬದ ರೀತಿಯಲ್ಲಿ ಸಂತೋಷದಿಂದ ಬರೆಯಬೇಕು. ನಿಶ್ಚಿತ ಗುರಿ ತಲುಪಲು ಧನಾತ್ಮಕ ಚಿಂತನೆ ಸೂಕ್ತ. ಜೊತೆಗೆ ಉತ್ತಮ ಆರೋಗ್ಯ ಕಾಯ್ದುಕೊಳ್ಳುವುದು ಕೂಡ ಅಷ್ಟೇ ಅವಶ್ಯ. ವರ್ಷದ ಪ್ರಯತ್ನ ಮೂರು ಗಂಟೆಗಳಲ್ಲಿ ನಿರ್ಧರಿಸಲ್ಪಡುತ್ತದೆ. ಪರೀಕ್ಷೆಯ ಮುಂಚೆ ಹಾಗೂ ಪರೀಕ್ಷಾ ಸಮಯದಲ್ಲಿ ಆರೋಗ್ಯದ ಕಡೆಗೆ ಹೆಚ್ಚು ಗಮನಹರಿಸಿದರೆ ಒಳ್ಳೆಯದು. ಊಟ ಬಿಟ್ಟು, ನಿದ್ದೆಗೆಟ್ಟು ಓದುವುದು ಸರಿಯಾದ ಕ್ರಮವಲ್ಲ. ಈ ವಿಚಾರ ಎಲ್ಲರಿಗೂ ತಿಳಿದಿರಲಿ. ಪ್ರಯತ್ನಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ. ಆದ್ದರಿಂದ ಕಷ್ಟ ಪಟ್ಟು ಓದಬೇಡಿ, ಇಷ್ಟ ಪಟ್ಟು ಓದಿ.



**– ಈಶ್ವರ ಕುರಿ(ಜಕ್ಕಲಿ).**

### ಡಿಸೆಂಬರ್ 15, 'ಅಂತಾರಾಷ್ಟ್ರೀಯ ಚಹಾ ದಿನ'ದ ನಿಮಿತ್ತ ವಿಶೇಷ ಲೇಖನ

# ಚಹಾ ಕುಡಿದು ಚಿಗರೆ ಹಂಗಿರಿ!




'ಚಹಾದ ಸ್ವಭಾವವು ನಮ್ಮನ್ನು ಜೀವನದ ಶಾಂತ ಚಿಂತನೆಯ ಜಗತ್ತಿಗೆ ಕರೆದೊಯ್ಯುತ್ತದೆ' ಎಂದು ಲಿನ್ ಯುಟಾಂಗ್ ಹೇಳಿರುವ ಹಾಗೆ ಚಹಾ ಸೇವನೆ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಅದು ಜೀವನದಲ್ಲಿ ಒಂದು ಪ್ರಾಮುಖ್ಯತೆಯ ಅಂಶವಾಗಿದೆ. ಹಾಗೆಯೇ ಚಹಾವು ಹೆಚ್ಚಿನ ಸಮಸ್ಯೆಗಳಿಗೆ ಉತ್ತರವಾಗಿದೆ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಅತಿ ಹೆಚ್ಚು ಬೇಡಿಕೆ ಹೊಂದಿರುವ ಪರಿಮಳಯುಕ್ತ ಪಾನೀಯವೇ ಚಹಾ ಆಗಿದೆ.

ಚಹಾ, ಕ್ಯಾಮೆಲಿಯಾ ಸಿನೆನ್ಸಿಸ್ ಎಂಬ ಚಹಾ ಸಸ್ಯದ ಎಳೆಯ ಎಲೆಗಳು ಮತ್ತು ಎಲೆಗಳ ಮೊಗ್ಗುಗಳನ್ನು ಹೊಸದಾಗಿ ಕುದಿಸಿದ ನೀರಿನಲ್ಲಿ ಮುಳುಗಿಸಿ ತಯಾರಿಸಿದ ಪಾನೀಯ. ಇದರಲ್ಲಿ ಸಣ್ಣ ಎಲೆಗಳಿರುವ ಚೀನಾ ಸಸ್ಯ ಮತ್ತು ದೊಡ್ಡ ಎಲೆಗಳ ಅಸ್ಸಾಂ ಸಸ್ಯ, ಎರಡೂ ಪ್ರಭೇದಗಳ ಮಿಶ್ರತಳಿಗಳನ್ನು ಸಹ ಬೆಳೆಯಲಾಗುತ್ತದೆ.

ಚೀನಾದ ದಂತಕಥೆಯಲ್ಲಿರುವಂತೆ, ಷೆನ್ನಾಂಗ್ ಎನ್ನುವ ಒಬ್ಬ ಜನಪ್ರಿಯ, ಐತಿಹ್ಯವನ್ನು ಹೊಂದಿರುವ ಚೀನಾದ ಚಕ್ರವರ್ತಿ ಕೃಷಿ ಹಾಗೂ ಚೀನಾದ ಔಷಧಿಯ ಸಂಶೋಧಕ. ಕ್ರಿ ಪೂ ಸರಿಸುಮಾರು 2737ರ ಕಾಲದಲ್ಲಿ ಚಹಾ ಎಂಬ ಪೇಯವನ್ನು ಮೊತ್ತಮೊದಲ ಬಾರಿ ಬಳಸಿದ ಎಂಬ ಕಥೆಯಿದೆ.

ಆಧುನಿಕ ಯುಗದಲ್ಲಿ ಚಹಾ ದಿನ ಆಚರಣೆ ಹಿನ್ನೆಲೆಯನ್ನು ಗಮನಿಸಿದರೆ 2005ರಲ್ಲಿ, ಮೊದಲ ಅಂತಾರಾಷ್ಟ್ರೀಯ ಚಹಾ ದಿನವನ್ನು ಭಾರತದ ನವದೆಹಲಿಯಲ್ಲಿ ಆಚರಿಸಲಾಯಿತು. ಮತ್ತೊಂದೆಡೆ, ಭಾರತ ಸರ್ಕಾರವು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಗೆ 2015ರಲ್ಲಿ ಚಹಾ ದಿನವನ್ನು ಪ್ರಪಂಚದಾದ್ಯಂತ ವಿಸ್ತರಿಸಲು ಶಿಫಾರಸು ಮಾಡಿತು. ಭಾರತ, ಶ್ರೀಲಂಕಾ, ನೇಪಾಳ, ವಿಯೆಟ್ನಾಂ, ಇಂಡೋನೇಷಿಯಾ, ಬಾಂಗ್ಲಾದೇಶ, ಕೀನ್ಯಾ, ಮಲೇಷಿಯಾ, ಉಗಾಂಡಾ ಹಾಗೂ ತಾಂಜಾನಿಯಾದಂತಹ ಚಹಾ ಉತ್ಪಾದಿಸುವ ದೇಶಗಳಲ್ಲಿ 2005ರಿಂದ ಡಿಸೆಂಬರ್ 15ರಂದು ಅಂತಾರಾಷ್ಟ್ರೀಯ ಚಹಾ ದಿನವನ್ನು ಆಚರಿಸಲಾಗುತ್ತಿದೆ.

ಚಹಾ ಎಲೆಗಳು 700ಕ್ಕೂ ಹೆಚ್ಚಿನ ರಾಸಾಯನಿಕ ವಸ್ತುಗಳನ್ನು ಒಳಗೊಂಡಿದ್ದು, ಅವುಗಳ ಪೈಕಿ ಮಾನವನ ಆರೋಗ್ಯಕ್ಕೆ ತೀರಾ ಸನಿಹವಾಗಿ ಸಂಬಂಧಿಸಿರುವ ಫ್ಲೇವನಾಯ್ಡ್, ಅಮೈನೋ ಆಮ್ಲ, ವಿಟಮಿನ್, ಕೆಫೀನ್ ಮತ್ತು ಪಾಲಿಸ್ಯಾಕರೈಡ್‌ಗಳು ಇವೆ. ಎಲ್ಲಕ್ಕಿಂತ ಮಿಗಿಲಾಗಿ, ಮಾನವ ಶರೀರದ ಜೀವಕೋಶದ ಮಧ್ಯಸ್ಥಿಕೆಯ ಪ್ರತಿರಕ್ಷಣಾ ಕಾರ್ಯದೊಂದಿಗೆ ಚಹಾ ಸೇವನೆಯು ಸಂಬಂಧ ಹೊಂದಿದೆ ಎಂದು ಇತ್ತೀಚೆಗೆ ಸಾಬೀತಾಗಿದೆ. ರಕ್ತದ ಗ್ಲೂಕೋಸ್‌ನ ಚಟುವಟಿಕೆಯನ್ನು ತಗ್ಗಿಸುವ ಮೂಲಕ ಪರಿಧಮನಿಯ ಹೃದ್ರೋಗ ಹಾಗೂ ಮಧುಮೇಹವನ್ನು ತಡೆಗಟ್ಟುವಲ್ಲಿ ಚಹಾದ ಪಾತ್ರವು ಉತ್ತಮ ರೀತಿಯಲ್ಲಿ ಪ್ರಮಾಣೀಕರಿಸಲ್ಪಟ್ಟಿದೆ.

ಭಾರತದಲ್ಲಿ ಮೊದಲ ಬಾರಿಗೆ 1824ರಲ್ಲಿ ಬರ್ಮಾ ಮತ್ತು ಭಾರತದ ಅಸ್ಸಾಂ ನಡುವಿನ ಗಡಿಯಲ್ಲಿ ಬೆಟ್ಟಗಳಲ್ಲಿ ಚಹಾ ಸಸ್ಯಗಳನ್ನು ಕಂಡುಹಿಡಿಯಲಾಯಿತು. ಬ್ರಿಟಿಷರು 1836ರಲ್ಲಿ ಭಾರತಕ್ಕೆ ಮತ್ತು 1867ರಲ್ಲಿ ಸಿಲೋನ್ (ಶ್ರೀಲಂಕಾ)ಗೆ ಚಹಾ ಸಂಸ್ಕೃತಿಯನ್ನು ಪರಿಚಯಿಸಿದರು.

ಚೀನಾವು ವಿಶ್ವದಲ್ಲೇ ಅತಿ ಹೆಚ್ಚು ಚಹಾ ಉತ್ಪಾದಕ ದೇಶವಾಗಿದೆ. ನಂತರ ಭಾರತವು ಜಾಗತಿಕವಾಗಿ ದೇಶದ ಚಹಾ ಉತ್ಪಾದನೆಯ ಸುಮಾರು ಶೇ.83ರಷ್ಟು ಪಾಲು ಹೊಂದಿದೆ. ಹೀಗಾಗಿ ಭಾರತ ಚಹಾ ಉತ್ಪಾದನೆಯಲ್ಲಿ ಎರಡನೇ ಅತಿದೊಡ್ಡ ದೇಶವಾಗಿದೆ. ಹಾಗೆಯೇ ಭಾರತದಲ್ಲಿ ಅಸ್ಸಾಂ ಅತಿಹೆಚ್ಚು ಚಹಾ ಉತ್ಪಾದಿಸುವ ರಾಜ್ಯ. ಇದು ಜಾಗತಿಕವಾಗಿ 400 ಮಿಲಿಯನ್ ಕೆಜಿಗಿಂತ ಹೆಚ್ಚು ಚಹಾವನ್ನು ಉತ್ಪಾದನೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ.

ಕಾಶ್ಮೀರಿ ಕಹ್ವಾ, ಜಿಂಜರ್ ಟೀ, ತುಳಸಿ ಟೀ, ಸುಲೈಮಾನಿ ಟೀ, ರೋಂಗಾ ಸಾಹ್, ಮಸಾಲಾ ಟೀ, ಲೆಮನ್‌ಗ್ರಾಸ್ ಟೀ, ಏಲಕ್ಕಿ ಟೀ, ಲೆಂಬು ಚಾಯ್, ಗ್ರೀನ್ ಟೀ, ಗುರ್ ಗುರ್ ಚಾಯ್/ಬೆಣ್ಣೆ ಹೀಗೆ ಅನೇಕ ವಿಧಗಳನ್ನು ಬಳಸಲಾಗುತ್ತಿದೆ.



**– ಬಸವರಾಜ ಎಮ್.ಯರಗುಪ್ಪಿ.**
ಬಿಆರ್‌ಪಿ, ಶಿರಹಟ್ಟಿ–ಲಕ್ಷ್ಮೇಶ್ವರ.

## ಗೃಹ ವಿಜ್ಞಾನ ವಿದ್ಯಾರ್ಥಿಗಳಿಂದ ವೃದ್ಧಾಶ್ರಮಕ್ಕೆ ಭೇಟಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಕೆ.ಎಲ್.ಇ. ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಗೃಹ ವಿಜ್ಞಾನ ವಿಭಾಗದ ಬಿಎ ಅಂತಿಮ ವರ್ಷದ ವಿದ್ಯಾರ್ಥಿಗಳು ಗದುಗಿನ ಜಾಕಿರ್ ಹುಸೇನ್ ಕಾಲೋನಿಯಲ್ಲಿರುವ ಜೀವನ ಸಂಧ್ಯಾ ಮಣಿಬಾಯಿ ಕಾಂತಿಲಾಲ್ ಷಾ ವೃದ್ಧಾಶ್ರಮಕ್ಕೆ ಶೈಕ್ಷಣಿಕ ಭೇಟಿ ನೀಡಿದರು.

ವಿದ್ಯಾರ್ಥಿಗಳು ವೃದ್ಧರೊಂದಿಗೆ ಆತ್ಮೀಯವಾಗಿ ಮಾತನಾಡಿ, ಯೋಗಕ್ಷೇಮ ವಿಚಾರಿಸಿ, ವೃದ್ಧರ ದೈನಂದಿನದ ಚಟುವಟಿಕೆಗಳು, ಊಟ–ಉಪಚಾರ ಇತ್ಯಾದಿಗಳ ಕುರಿತು ಹಿರಿಯರೊಂದಿಗೆ ಚರ್ಚಿಸಿದರು. ವಿದ್ಯಾರ್ಥಿಗಳೊಂದಿಗೆ ಗೃಹ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ವೀಣಾ ತಿರ್ಲಾಪೂರ ಉಪಸ್ಥಿತರಿದ್ದರು. ಪ್ರಾಚಾರ್ಯ ಡಾ. ಎ.ಕೆ. ಮಠ ಅವರ ಮಾರ್ಗದರ್ಶನದಲ್ಲಿ ಈ ಶೈಕ್ಷಣಿಕ ಭೇಟಿ ಹಮ್ಮಿಕೊಳ್ಳಲಾಗಿತ್ತು.

## ಬಿ.ಇಡಿ ಕೋರ್ಸಿನ ದಾಖಲಾತಿ ಪರಿಶೀಲನೆ

**■ವಿಜಯಸಾಕ್ಷಿ ಸುದ್ದಿ, ಗದಗ**

2023–24ನೇ ಸಾಲಿನ ಎರಡು ವರ್ಷದ ಬಿ.ಇಡಿ ಕೋರ್ಸಿನ ದಾಖಲಾತಿ ಪರಿಶೀಲನೆಗೆ ಮತ್ತು ಪ್ರವೇಶ ಪ್ರಕ್ರಿಯೆಯ ಮೊದಲನೇ ಸುತ್ತು ಡಿಸೆಂಬರ್ 15 ರಿಂದ ಪ್ರಾರಂಭವಾಗಿ ಡಿಸೆಂಬರ್ 20 ರವರೆಗೆ ಕೊನೆಯ ದಿನಾಂಕವಾಗಿರುತ್ತದೆ. ಆಯ್ಕೆಯಾದ ಅಭ್ಯರ್ಥಿಗಳು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಕಳಸಾಪುರ ರೋಡ ಗದಗ ಇಲ್ಲಿ ಮೂಲ ದಾಖಲೆಗಳೊಂದಿಗೆ ಮತ್ತು ಒಂದು ಸೆಟ್ ಝರಾಕ್ಸ್ ಪ್ರತಿಯೊಂದಿಗೆ ಹಾಜರಾಗಿ ದಾಖಲೆಗಳ ಪರಿಶೀಲನೆ ಮಾಡಿಸಲು ಈ ಮೂಲಕ ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ www.schooleducation.kar.nic.in ಜಾಲತಾಣವನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಶ್ರೀಮತಿ ಮಂಗಳಾ ತಾಪಸ್ಕರ್ ನೋಡಲ್ ಅಧಿಕಾರಿಗಳು ಡಯಟ್ ಗದಗ ಮೊ.ಸಂ. 9449089703 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರ (ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸಿನ ಮೂಲಕ https://shp.karnataka.gov.in ಅರ್ಜಿ ಸಲ್ಲಿಸುವ ದಿನಾಂಕವನ್ನು ಡಿಸೆಂಬರ್ 22 ರವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಗದಗ ದೂರವಾಣಿ ಸಂಖ್ಯೆ 08372–237414 ಸಂಪರ್ಕಿಸಬಹುದಾಗಿದೆ.

## ಕಂಪನಿ ಹೆಸರಲ್ಲಿ ಭೂಮಿ ಪಡೆದು ರಿಯಲ್ ಎಸ್ಟೇಟ್ ವ್ಯವಹಾರ ನಡೆಸಲು ಅವಕಾಶ ಕೊಡಲ್ಲ– ಸಿಎಂ



**■ವಿಜಯಸಾಕ್ಷಿ ಸುದ್ದಿ, ಬೆಳಗಾವಿ**

ಕಂಪನಿ ಹೆಸರಲ್ಲಿ ಭೂಮಿ ಪಡೆದು ರಿಯಲ್ ಎಸ್ಟೇಟ್ ವ್ಯವಹಾರ ನಡೆಸಲು ಅವಕಾಶ ಕೊಡಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ಸೂಚನೆ ನೀಡಿದ್ದಾರೆ.

ಸಂಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುಡುತಿನಿ ಅರ್ಸೆಲರ್ ಮಿತ್ತಲ್ ಇಂಡಿಯಾ ಸೇರಿದಂತೆ ವಿವಿಧ ಕಾರ್ಖಾನೆಗಳ ಆರಂಭ ಮತ್ತು ರೈತರ ಸಮಸ್ಯೆಗಳ ಬಗ್ಗೆ ಶಾಸಕರಾದ ತುಕಾರಾಂ ನೇತೃತ್ವದ ನಿಯೋಗ ಭೇಟಿಯಾಗಿ, ಚರ್ಚಿಸಿದ ನಂತರ ಮಾತನಾಡಿದ ಮುಖ್ಯಮಂತ್ರಿ, ರೈತರಿಗೆ ಅನ್ಯಾಯ ಆಗಲು ಬಿಡುವುದಿಲ್ಲ. ಕಂಪನಿ ಹೆಸರಲ್ಲಿ ಭೂಮಿ ಪಡೆದು ರಿಯಲ್ ಎಸ್ಟೇಟ್ ವ್ಯವಹಾರ ನಡೆಸಲು ಅವಕಾಶ ಕೊಡುವುದಿಲ್ಲ ಎಂದರು.

ಕಾರ್ಖಾನೆಗಳಿಗಾಗಿ ಭೂಸ್ವಾಧೀನ ಮಾಡಿಕೊಳ್ಳುವ ಸಂದರ್ಭದಲ್ಲಿ ದರ ನಿಗದಿಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯು ಅನ್ಯಾಯವೆಸಗಿದ್ದರೆ ಅದನ್ನು ಕೂಡ ಪರಿಶೀಲಿಸಿ, ಸಮಸ್ಯೆ ಬಗೆಹರಿಸಲಾಗುವುದು. ಅರ್ಸೆಲರ್ ಮಿತ್ತಲ್ ಕಾರ್ಖಾನೆಗಾಗಿ ನಡೆಸಿರುವ ಭೂಸ್ವಾಧೀನ ಮತ್ತು ರೈತರಿಗೆ ನೀಡಿರುವ ಪರಿಹಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸುಪ್ರೀಂ ಕೋರ್ಟಿನ ತೀರ್ಪಿನ ಬಗ್ಗೆ ಅಡ್ವೋಕೇಟ್ ಜನರಲ್ ಅವರ ಜೊತೆಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ನಾಗೇಂದ್ರ, ಸಂಡೂರು ಶಾಸಕ ಇ.ತುಕಾರಾಂ, ಜಿಲ್ಲೆಯ ಶಾಸಕರುಗಳಾದ ಕಂಪ್ಲಿ ಗಣೇಶ್, ನಾ.ರಾ.ಭರತ್ ರೆಡ್ಡಿ, ಸರ್ಕಾರದ ಹಿರಿಯ ಅಧಿಕಾರಿಗಳು ಹಾಗೂ ಭೂಮಿ ಕಳೆದುಕೊಂಡ ರೈತ ಪ್ರತಿನಿಧಿಗಳು ಭಾಗವಹಿಸಿದ್ದರು.

# ಶ್ರೀ ವರಸಿದ್ಧಿ ವೀರಾಂಜನೇಯ ದೇವಸ್ಥಾನದ ಕಾರ್ತಿಕೋತ್ಸವ

**■ ವಿಜಯಸಾಕ್ಷಿ ಸುದ್ದಿ, ಗದಗ**

ಇಲ್ಲಿನ ಶ್ರೀ ಶರಣಬಸವೇಶ್ವರ ನಗರದಲ್ಲಿ ಶ್ರೀ ವರಸಿದ್ಧಿ ವೀರಾಂಜನೇಯ ವಿವಿದೋದ್ದೇಶಗಳ ಸಂಘ, ಶ್ರೀ ವರಸಿದ್ದಿ ವೀರಾಂಜನೇಯ ದೇವಸ್ಥಾನದ ಸೇವಾ ಸಮಿತಿ ವತಿಯಿಂದ ಮುಕ್ಕಣ್ಣೇಶ್ವರ ಮಠದ ಶ್ರೀ ಶಂಕರಾನಂದ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಡಿ.16ರಂದು ಕಾರ್ತಿಕೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಅಧ್ಯಕ್ಷ ಹರೀಶ.ವಿ. ಪೂಜಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯದರ್ಶಿ ವಿ.ಎ. ಸೋನಾರ್, ಸಿ.ಎಸ್. ಸಂಗೊಳ್ಳಿ, ಖಜಾಂಚಿ ಗವಿಸಿದ್ದ ಚಲವಾದಿ, ಎಸ್.ವಿ ಹಾದಿಮನಿ, ಶ್ರೀಕಾಂತ ಚಳಗೇರಿ, ಮಹೇಂದ್ರ ಬಳ್ಳಿ, ಬಸವರಾಜ ಚವಡಿ, ಎಸ್.ಎಸ್. ಶಿವಶಿಂಪರ್ ಮತ್ತು ಪದಾಧಿಕಾರಿಗಳು, ಸದ್ಯಸರು ಸರ್ವರಿಗೂ ಸ್ವಾಗತ ಕೋರಿದ್ದಾರೆ.

# ಮಾಗಡಿ ಕೆರೆಯಲ್ಲಿ ವಲಸೆ ಪಕ್ಷಿ ಸಾವು



**■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ತಾಲೂಕಿನಲ್ಲಿರು ವಲಸೆ ಪಕ್ಷಿಗಳ ತಾಣ ಮಾಗಡಿ ಕೆರೆಯಲ್ಲಿ ಗುರುವಾರ ಮಂಗೋಲಿಯಾದಿಂದ ವಲಸೆ ಬಂದಿದ್ದ ಬಾರ್ ಹೆಡೆಡ್ ಗೂಸ್ ಪಕ್ಷಿಯು ಕೆರೆಯ ದಡದಲ್ಲಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದೆ.

ಈ ಕುರಿತು ಪ್ರತಿಕ್ರಿಯಿಸಿದ ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ರಾಮಪ್ಪ ಪೂಜಾರ, ತಲೆ ಹಕ್ಕಿ ಎಂದು ಕರೆಯಿಸಿಕೊಳ್ಳುವ ಮಂಗೋಲಿಯಾದ ಬಾರ್ ಹೆಡೆಡ್ ಗೂಸ್ ಪಕ್ಷಿಯು ಮೃತಪಟ್ಟಿದ್ದು, ಮರಣೋತ್ತರ ಪರೀಕ್ಷೆಗಾಗಿ ಶಿರಹಟ್ಟಿಯ ಆಸ್ಪತ್ರೆಗೆ ಕಳುಹಿಸಿಕೊಡಲಾಗಿದೆ. ವರದಿ ಬಂದ ನಂತರ ಸಾವಿನ ನಿಖರ ಮಾಹಿತಿ ತಿಳಿಯಬಹುದಾಗಿದೆ. ಇದೀಗ ವಿದೇಶದಿಂದ ವಲಸೆ ಪಕ್ಷಿಗಳು ಕೆರೆಗೆ ಆಗಮಿಸುತ್ತಿದ್ದು, ಪ್ರವಾಸಿಗರೂ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದಾರೆ. ಇಲಾಖೆಯ ವತಿಯಿಂದ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಲಾಗುವುದು.

ಗ್ರಾಮಸ್ಥರ ಸಮಿತಿ ವತಿಯಿಂದ ಕೆರೆಯ ಸುತ್ತಲೂ ಸ್ವಚ್ಛತೆ ಕಾಯ್ದುಕೊಳ್ಳುವುದಕ್ಕಾಗಿ ಜಾಗೃತಿ ಮೂಡಿಸಲಾಗಿದೆ. ಗ್ರಾ.ಪಂ ಪಿಡಿಓ ಅವರಿಗೂ ಸ್ವಚ್ಛಗೊಳಿಸುವಂತೆ ಮನವಿ ಮಾಡಿಕೊಳ್ಳಲಾಗಿದೆ ಎಂದರು.

ಸಂರಕ್ಷಿತ ಕೆರೆ ಎಂದು ಗುರುತಿಸಿಕೊಂಡಿದ್ದರೂ ಸಹ ಕೆರೆಯ ಸುತ್ತಲೂ ಎಲ್ಲೆಂದರಲ್ಲಿ ಕಸದ ರಾಶಿ ಬಿದ್ದಿದ್ದು, ಸ್ವಚ್ಛತೆ ಇಲ್ಲದಂತಾಗಿದೆ. ಆದ್ದರಿಂದ ಕೆರೆಯ ಸುತ್ತಲಿನ ವಾತಾವರಣದಲ್ಲಿ ಸ್ವಚ್ಛತೆ ಕಾಪಾಡುವುದು ಅವಶ್ಯವಾಗಿದ್ದು, ಈ ರೀತಿ ಪಕ್ಷಿಗಳು ಸಾವನ್ನಪ್ಪದಂತೆ ಮುನ್ನೆಚ್ಚರಿಕೆ ವಹಿಸುವುದು ಕೂಡಾ ಅಷ್ಟೇ ಮುಖ್ಯವಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಲಿಂಗಾಯತ ಪ್ರಗತಿಶೀಲ ಸಂಘದ 2671ನೇ ಶಿವಾನುಭವ ಕಾರ್ಯಕ್ರಮದಲ್ಲಿ ಶಾಂತಲಿಂಗ ಶ್ರೀಗಳು

# ನಿಜಗುಣ ಶಿವಯೋಗಿಗಳ ಬದುಕು ಮಾದರಿ

**■ ವಿಜಯಸಾಕ್ಷಿ ಸುದ್ದಿ, ಗದಗ**

ನಿಜಗುಣ ಶಿವಯೋಗಿಗಳು ಕನ್ನಡ ಸಾರಸ್ವತ ಲೋಕಕ್ಕೆ, ಆಧ್ಯಾತ್ಮಿಕ, ಧಾರ್ಮಿಕ ಲೋಕಕ್ಕೆ ಆರು ಶಾಸ್ತ್ರಗಳನ್ನು ನೀಡಿದ್ದಾರೆ. ನಿಜಗುಣ ಶಿವಯೋಗಿಗಳ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಶಾಸ್ತ್ರ, ಪುರಾಣ, ಪ್ರವಚನಗಳು ಇಂದಿಗೂ ನಡೆಯುತ್ತಿವೆ. ಅವರ ಬದುಕು-ಆದರ್ಶಗಳು ಇಂದಿನ ಮಠಾಧೀಶರಿಗೆ ಮಾದರಿಯಾಗಿದೆ ಎಂದು ಭೈರನಹಟ್ಟಿ ಪೂಜ್ಯ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಲಿಂಗಾಯತ ಪ್ರಗತಿಶೀಲ ಸಂಘದ 2671ನೇ ಶಿವಾನುಭವ ಕಾರ್ಯಕ್ರಮದ ಸಮ್ಮುಖ ವಹಿಸಿ ಮಾತನಾಡಿದ ಶ್ರೀಗಳು, ಮನುಷ್ಯನ ಬದುಕನ್ನು ಸುಂದರವಾಗಿಸುವ ಶಕ್ತಿ 12ನೇ ಶತಮಾನದ ಶರಣರ ವಚನಗಳಲ್ಲಿ ಅಡಗಿದೆ. ಶರಣರು ಸಮಾಜಕ್ಕೆ ಕೊಡುಗೆಯಾಗಿ ನೀಡಿದ ವಚನಗಳಲ್ಲಿನ ಕಾಯಕ, ದಾಸೋಹ ತತ್ತ್ವಗಳನ್ನು ಜೀವನದ ಅವಿಭಾಜ್ಯ ಅಂಗವಾಗಿಸಿಕೊಂಡು ನಡೆಯಬೇಕು. ಮಹಾತ್ಮರ ಆದರ್ಶಗಳು, ನಡೆ-ನುಡಿ, ಆಚಾರ-ವಿಚಾರಗಳು ಪ್ರಸ್ತುತ ದಿನಮಾನಕ್ಕೆ ಆವಶ್ಯ ಎಂದು ತಿಳಿಸಿದರು.



ಧಾರವಾಡ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಪ್ರೊ. ಕೆ.ಎಸ್. ಕೌಜಲಗಿ ಮಾತನಾಡಿ, ನಿಜಗುಣರು ಕನ್ನಡದಲ್ಲಿ ಮೊದಲನೆ ಯೋಗ ಪುಸ್ತಕ, ವಿವೇಕಚಿಂತಾಮಣಿ ವಿಶ್ವಕೋಶ, ಕೈವಲ್ಯಪದ್ಧತಿ ರಚಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಗದ್ಯ-ಪದ್ಯ ಶಾಸ್ತ್ರ, ಕಾವ್ಯ ಸಂಗೀತ-ಸಾಹಿತ್ಯಕ್ಕೆ ವಿಶೇಷವಾದ ಕೊಡುಗೆಯನ್ನು ನಿಜಗುಣ ಶಿವಯೋಗಿಗಳು ನೀಡಿದ್ದಾರೆ ಎಂದು ತಿಳಿಸಿದರು.

ಧಾರವಾಡ ಜಿಲ್ಲಾ ಕಸಾಪ ಅಧ್ಯಕ್ಷ ಲಿಂಗರಾಜ ಅಂಗಡಿ ಮಾತನಾಡಿ, ಪ್ರತಿಯೊಂದು ಧರ್ಮವೂ ಒಳ್ಳೆಯದನ್ನೇ ಹೇಳುತ್ತದೆ. ಧರ್ಮಗಳಲ್ಲಿರುವ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಸಾಮರಸ್ಯದ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಸರ್ವರನ್ನು ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ.ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

ಸಂಗೀತ ಕಲಾವಿದ ಶ್ರೀಶೈಲ ಚಿಕ್ಕಮಠ ಅವರಿಂದ ವಚನ ಸಂಗೀತ, ತಬಲಾ ಸಾಥ್ ಪಡಗಾನೂರ, ಮಲ್ಲಿಕಾರ್ಜುನ ಭಜಂತ್ರಿ ಶಹನಾಯಿ ವಾದನ ನಡೆಯಿತು. ಮೃತ್ಯುಂಜಯ ಹಿರೇಮಠ, ಗುರುನಾಥ ಸುತಾರ ಸಂಗಡಿಗರು ವಚನ ಸಂಗೀತ ಹಾಡಿದರು. ವೀಣಾ ವಿ.ತುಪ್ಪದ ಧರ್ಮಗ್ರಂಥ ಪಠಣಗೈದರು. ಗಣೇಶ ಎ.ಹಡಗಲಿ ಇವರಿಂದ ವಚನ ಚಿಂತನ ನಡೆಯಿತು. ಶಿವಾನುಭವ ಭಕ್ತಿಸೇವೆಯನ್ನು ವಹಿಸಿದ ಕಾತರಕಿ ಪರಿವಾರದವರನ್ನು ಶ್ರೀಗಳು ಸಂಮಾನಿಸಿದರು.

# ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆ




**■ ವಿಜಯಸಾಕ್ಷಿ ಸುದ್ದಿ, ಗದಗ**

ಅಂತಾರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳ 2024ರ ಅಂಗವಾಗಿ ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆಯನ್ನು ಬುಧವಾರ ನಗರದ ಮುಳಗುಂದ ರಸ್ತೆಯಲ್ಲಿನ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಿರಿಧಾನ್ಯಗಳು ಅನೇಕ ಪೋಷಕಾಂಶಗಳನ್ನು ಹೊಂದಿದ್ದು, ಅವುಗಳ ಸೇವನೆಯಿಂದ ರೋಗನಿರೋಧಕ ಶಕ್ತಿ ಹೆಚ್ಚಿಸಬಹುದಾಗಿದೆ ಎಂದರು.

ಸ್ಪರ್ಧೆಯಡಿ ಜಿಲ್ಲೆಯ 27 ಜನ ಮಹಿಳೆಯರು ಭಾಗವಹಿಸಿ ತಾವು ತಯಾರಿಸಿದ ಸಿಹಿ ಹಾಗೂ ಖಾರ ಸಿರಿಧಾನ್ಯಗಳ ಪದಾರ್ಥಗಳನ್ನು ಪ್ರದರ್ಶಿಸಿದರು. ತೀರ್ಪುಗಾರರಾಗಿ ಆರ್.ಡಿ.ಪಿ.ಆರ್ ವಿಶ್ವವಿದ್ಯಾಲಯದ ಆಹಾರ ವಿಜ್ಞಾನ ಹಾಗೂ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ. ಸಾವಿತ್ರಿ ಬ್ಯಾಡಗಿ, ಕೆ.ವಿ.ಕೆ. ಹುಲಕೋಟಿಯ ಗೃಹ ವಿಜ್ಞಾನ ವಿಭಾಗದ ವಿಜ್ಞಾನಿಗಳಾದ ಡಾ. ಸುಧಾ ಮಂಕಣಿ ಭಾಗವಹಿಸಿ ಮೌಲ್ಯಮಾಪನ ಮಾಡಿದರು. ಮುತ್ತವ್ವ ಅ.ಪೂಜಾರ ಮುಂಡರಗಿ ಅವರು ಸಿಹಿ ತಿನಿಸಿನಲ್ಲಿ ಪ್ರಥಮ ಸ್ಥಾನ ಹಾಗೂ ಅಕ್ಷತಾ ಮೂಲಿಮನಿ ಬಿಂಕದಕಟ್ಟಿ ಅವರು ಖಾರ ತಿನಿಸಿನಲ್ಲಿ ಪ್ರಥಮ ಸ್ಥಾನ ಪಡೆದರು.

ಉಪ ಕೃಷಿ ನಿರ್ದೇಶಕಿ ಸ್ಫೂರ್ತಿ ಸ್ವಾಗತಿಸಿದರು. ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ ಜಿ.ಎಚ್. ಪ್ರಾಸ್ತಾವಿಕವಾಗಿ ಮಾತನಾಡಿದರು.

# ಮನಸ್ಸಿಗೆ ಮುಪ್ಪು ಎಂಬುದಿಲ್ಲ: ಕವಿತಾ ಕಾಶಪ್ಪನವರ

**■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಮನುಷ್ಯನ ದೇಹಕ್ಕೆ ವಯಸ್ಸಾಗಬಹುದೇ ಹೊರತು ಮನಸ್ಸು ಎಂದಿಗೂ ಮುಪ್ಪಾಗದು ಎಂದು ನಿವೃತ್ತ ಪ್ರಾಚಾರ್ಯೆ ಕವಿತಾ ಕಾಶಪ್ಪನವರ ಅಭಿಪ್ರಾಯಪಟ್ಟರು.

ಪಟ್ಟಣದ ಶ್ರೀ ದ್ಯಾಮವ್ವ ದೇವಿ ಜಾತ್ರಾ ಮಹೋತ್ಸವದಲ್ಲಿ ಅವರು 'ಜೀವನದಲ್ಲಿ ಹಾಸ್ಯ' ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಮನಸ್ಸಿನ ಭಾವನೆಗಳು ಒಗ್ಗೂಡಿದಾಗ ಮಾತ್ರ ಒಂದು ಕೆಲಸ ಯಶಸ್ವಿಯಾಗಲು ಸಾಧ್ಯ. ಇಂತಹ ಜಾತ್ರೆ ಉತ್ಸವಗಳು ನಡೆಯಬೇಕೆಂದರೆ ಎಲ್ಲರ ಮನಸ್ಸುಗಳು ಒಂದಾದಾಗ ಮಾತ್ರ ಈ ಕಾರ್ಯ ಸಾಧ್ಯವಾಗುತ್ತದೆ. ಇಲ್ಲಿನ ಜಾತ್ರೆಯ ಉತ್ಸಾಹವನ್ನು ನೋಡಿದರೆ ಎಲ್ಲರ ಮನಸ್ಸುಗಳು ಒಂದಾಗಿವೆ ಎಂಬುದು ಸ್ಪಷ್ಟವಾಗುತ್ತದೆ ಎಂದರು.



ಇಲ್ಲಿ ಕುಳಿತ ಮಹಿಳೆಯರೆಲ್ಲರೂ ಸ್ತ್ರೀ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆ-ರೆದಂತೆ ಎಂಬುದನ್ನು ಎಲ್ಲರೂ ನೆನಪಿನಲ್ಲಿಡಬೇಕು.

ಬಡವರಾಗಿ ಹುಟ್ಟುವುದು ತಪ್ಪಲ್ಲ, ಬಡವರಾಗಿ ಬದುಕುವುದು ತಪ್ಪು. ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಅವರನ್ನು ಸಂಸ್ಕಾರವಂತರನ್ನಾಗಿ ಮಾಡುವುದಲ್ಲದೆ, ಶ್ರೀಮಂತರನ್ನಾಗಿಯೂ ಮಾಡಿ ಎಂದು ಕಾಶಪ್ಪನವರ ಸಭಿಕರಿಗೆ ತಿಳಿಸಿದರು.

ಜಾತ್ರಾ ಮಹೋತ್ಸವ ಸಮಿತಿಯಿಂದ ಕವಿತಾ ಕಾಶಪ್ಪನವರನ್ನು ಸನ್ಮಾನಿಸಲಾಯಿತು. ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ ನಗೆಹಬ್ಬವನ್ನು ನಿರ್ವಹಿಸಿದರು.

# ವಿಕಲಚೇತನರ ಸಾಮರ್ಥ್ಯ ಗುರುತಿಸಿ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದ ಬಿ.ಡಿ ತಟ್ಟಿ (ಅ) ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್‌ನ ಕಿವುಡ ಮಕ್ಕಳ ವಸತಿಯುತ ಶಾಲೆಯಲ್ಲಿ ಗುರುವಾರ 'ವಿಶ್ವ ವಿಕಲಚೇತನರ ದಿನಾಚರಣೆ' ಕಾರ್ಯಕ್ರಮ ಆಚರಿಸಲಾಯಿತು.



ತಹಸೀಲ್ದಾರ ವಾಸುದೇವ ಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾಮಾನ್ಯರಿಗಿಂತ ವಿಕಲಚೇತನರಲ್ಲಿ ವಿಶೇಷ ಬುದ್ಧಿಮತ್ತೆ, ಗ್ರಹಣಶಕ್ತಿ, ಸಂಸ್ಕಾರ, ಶಿಸ್ತು, ಸಮಾಧಾನ ಗುಣಗಳು ಹೆಚ್ಚಾಗಿರುತ್ತವೆ. ಇಂತಹ ಮಕ್ಕಳಿಗೆ ಅನುಕಂಪದ ಬದಲಾಗಿ ಸೂಕ್ತ ತರಬೇತಿ, ಅವಕಾಶಗಳನ್ನು ಕಲ್ಪಿಸಿ ಅವರನ್ನೂ ಸ್ವಾವಲಂಬಿಗಳನ್ನಾಗಿ ರೂಪಿಸುವುದು ಸಮಾಜದ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಇಂತಹ ವಿಶೇಷ ಚೇತನ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ ತಟ್ಟಿ ಸಂಸ್ಥೆ ಹಾಗೂ ಸಿಬ್ಬಂದಿಗಳ ಕಾರ್ಯ ಶ್ಲಾಘನಿಯ ಎಂದರು.

ಅಪರಾಧ ವಿಭಾಗದ ಪಿಎಸ್‌ಐ ವ್ಹಿ.ಜಿ. ಪವಾರ ಮಾತನಾಡಿ, ವಿಶೇಷ ಚೇತನರಲ್ಲಿರುವ ಪ್ರತಿಭೆಗಳನ್ನು ಗುರುತಿಸಿ, ಅವಕಾಶ ನೀಡಿದರೆ ಅವರು ಸಾಧನೆ ಮಾಡಬಲ್ಲರು ಎಂದರು.

ಸಂಸ್ಥೆಯ ಧರ್ಮದರ್ಶಿ ಡಾ. ವಿನೋದ ಹೊನ್ನಿಕೊಪ್ಪ, ಸಂಸ್ಥೆಯ ವಿಕಲಚೇತನ ಮಕ್ಕಳಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಅವರ ಶ್ರೆಯೋಭಿವೃದ್ಧಿಗೆ ಸೇವೆ ಸಲ್ಲಿಸುತ್ತಿದ್ದೇವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಚೇರಮನ್ ಡಾ. ಎಸ್.ಜೆ. ತಟ್ಟಿ ವಹಿಸಿದ್ದರು. ಶಿಕ್ಷಕಿ ಪ್ರತಿಮಾ ಎಸ್.ಎಂ. ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಂದಾಯ ನಿರೀಕ್ಷಕ ಬಸವರಾಜ ಕಾತರಾಳ, ಸಿಆರ್‌ಪಿ ಸತೀಶ ಬೋಮಲೆ, ಮುಖ್ಯೋಪಾಧ್ಯಾಯೆ ಜಯಶ್ರೀ ಶೆಟ್ಟರ, ನಾಗರಾಜ ಮಜ್ಜಿಗುಡ್ಡ, ಜಿ.ಪಿ. ಪವಾರ, ಸಾಗರ ಪೂಜಾರಿ ಉಪಸ್ಥಿತರಿದ್ದರು.

ಅಶ್ವಿನಿ ಪಾಟೀಲ ನಿರೂಪಿಸಿದರು, ವಿಜಯಲಕ್ಷ್ಮಿ ಮುಧೋಳ, ಲಕ್ಷ್ಮಿ ರಬ್ಬನಗೌಡ್ರ ತರ್ಜುಮೆ ಮಾಡಿದರು, ಜಯಶ್ರೀ ಪಟ್ಟಣ ಸ್ವಾಗತಿಸಿದರು. ಸರೋಜಾ ಪೂಜಾರ ವಂದಿಸಿದರು.

# ವಿದ್ಯಾರ್ಥಿಗಳು ಸಮಯಕ್ಕೆ ಮಹತ್ವ ನೀಡಿ




**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ವಿದ್ಯಾರ್ಥಿ ಜೀವನದಲ್ಲಿ ಒಂದು ಉನ್ನತ ಗುರಿಯನ್ನು ಹೊತ್ತು ಶ್ರದ್ಧೆ, ಪ್ರಾಮಾಣಿಕತೆಯಿಂದ ದಿಟ್ಟ ಹೆಜ್ಜೆ ಇಟ್ಟಾಗ ಶ್ರೇಷ್ಠ ಸಾಧನೆ ಸಾಧ್ಯ ಎಂದು ಬಿಸಿಎನ್ ವಿದ್ಯಾಸಂಸ್ಥೆಯ ನಿರ್ದೇಶಕ ನಾಗರಾಜ ಕುಲಕರ್ಣಿ ಅಭಿಪ್ರಾಯಪಟ್ಟರು.

ಅವರು ಗುರುವಾರ ಪಟ್ಟಣದ ಬಿಸಿಎನ್ ವಿದ್ಯಾಸಂಸ್ಥೆಯ ಬಿಸಿಎನ್ ಸಿರಿ ವಿಜ್ಞಾನ, ವಾಣಿಜ್ಯ ಪದವಿ ಕಾಲೇಜಿನಲ್ಲಿ ಪ್ರಥಮ ವರ್ಷದ ವಿಜ್ಞಾನ ಮತ್ತು ವಾಣಿಜ್ಯ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳಾದವರು ಸಮಯಕ್ಕೆ ಮಹತ್ವ ನೀಡಿ. ಅಭ್ಯಾಸ ಸಮಯದಲ್ಲಿ ಸಮಯ ಪ್ರಜ್ಞೆ ಇರಲಿ. ಜಾಗತಿಕ ಶೈಕ್ಷಣಿಕ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳ ಸ್ವಯಂ ಪ್ರೇರಣೆ ಪ್ರಮುಖವಾಗಿದೆ.

ಸಂಸ್ಥೆಯ ಎಲ್ಲ ಸೌಲಭ್ಯಗಳನ್ನು ಬಳಸಿಕೊಂಡು ಜೀವನದಲ್ಲಿ ಯಶಸ್ಸು ಸಾಧಿಸಬೇಕು. ಮೊಬೈಲ್, ದೂರದರ್ಶನಗಳಿಂದ ದೂರವಿರುವುದು ಉತ್ತಮ ಫಲಿತಾಂಶವನ್ನು ತಂದುಕೊಡುತ್ತದೆ ಎನ್ನುವದನ್ನು ಮನಗಾಣಬೇಕು. ಪ್ರತಿಭೆ ಎಲ್ಲರಲ್ಲಿಯೂ ಅಡಗಿರುತ್ತದೆ. ಅದರ ಸದುಪಯೋಗ ಪಡೆಯುವದಕ್ಕೆ ಮುಂದಾಗಬೇಕು ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ಪ್ರಾಚಾರ್ಯ ವಿಜಯಕುಮಾರ ವಹಿಸಿದ್ದರು. ಅತಿಥಿಗಳಾಗಿ ಡಿ.ಎಂ. ಪೂಜಾರ, ಉಪನ್ಯಾಸಕರಾದ ಖುಷಾ ಅರಳಿ, ಸುಧಾ ಎಚ್., ವಿದ್ಯಾ ಬಾಲೇಹೊಸೂರು, ಪಂಚಾಕ್ಷರಿ ಹೂಗಾರ, ಮೇಘಾ ವಾಲೀಕಾರ, ನಾಜ್ ಹೆಸರೂರ ಹಾಗೂ ಪ.ಪೂ. ಕಾಲೇಜ ಉಪನ್ಯಾಸಕರು, ಸಿಬ್ಬಂದಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ನಸ್ರೀನ್‌ಬಾನು, ಸಖೀನಾ, ಭವ್ಯಶ್ರೀ, ಕವನಾ ನಿರೂಪಿಸಿದರು.




**■ ವಿಜಯಸಾಕ್ಷಿ ಸುದ್ದಿ, ಗದಗ**

ಗದುಗಿನ ರೆಹಮತ್ ನಗರದ ರಾಯಲ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಒಂದು ದಿನದ ಪ್ರವಾಸವಾಗಿ ನಗರದ ಪ್ರಾಣಿ ಸಂಗ್ರಹಾಲಯ, ಸಾಲುಮರದ ತಿಮ್ಮಕ್ಕನ ಉದ್ಯಾನವನಕ್ಕೆ ಶಾಲೆಯ ಪ್ರಾಥಮಿಕ ಶಾಲಾ ಮಕ್ಕಳನ್ನು ಕರೆದೊಯ್ಯಲಾಗಿತ್ತು. ವಿದ್ಯಾರ್ಥಿಗಳ ಜೊತೆಗೆ ಶಾಲೆಯ ಆಡಳಿತಾಧಿಕಾರಿ ಎ.ಎಂ. ಢಾಲಾಯತ್, ಸಹ ಶಿಕ್ಷಕಿಯರಾದ ಆರ್.ಎ. ಅಣ್ಣಿಗೇರಿ, ಎಫ್.ಡಿ. ನದಾಫ್ ಹಾಗೂ ಎಲ್ಲಾ ಶಿಕ್ಷಕರು ಪ್ರವಾಸದಲ್ಲಿ ಭಾಗಿಯಾಗಿದ್ದರು.

## BBPS ಪ್ಲಾಟ್‌ಫಾರ್ಮ್ ಮೂಲಕ ಆನ್‌ಲೈನ್ ಪಾವತಿ

**■ ವಿಜಯಸಾಕ್ಷಿ ಸುದ್ದಿ, ಗದಗ**

ಹೆಸ್ಕಾಂ ನಗರ ಪ್ರದೇಶದ ವಿದ್ಯುತ್ ಬಿಲ್ ಪಾವತಿಗಳ ಸಂಗ್ರಹಕ್ಕಾಗಿ ಭಾರತ್ ಬಿಲ್ ಪಾವತಿ ಆಪರೇಟಿಂಗ್ ಯುನಿಟ್ (BBPOU) ಸೇವಾಪೂರೈಕೆದಾರರಾದ **AIRTEL PAYMENTS BANK LIMITED** ಡಿ.13ರಿಂದ ಲೈವ್ ಆಗಿದ್ದು, ಇನ್ನು ಮುಂದೆ ಹೆಸ್ಕಾಂ ನಗರ ಪ್ರದೇಶದ ಗ್ರಾಹಕರು BBPS ಪ್ಲಾಟ್‌ಫಾರ್ಮ್‌ಗಳಾದ **googlepay, phonepe, paytm** ಇತ್ಯಾದಿಗಳ ಮೂಲಕ ವಿದ್ಯುತ್ ಬಿಲ್ ಪಾವತಿಸುವ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಬೇಕೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಇಂದು ಕುರ್ತಕೋಟಿಯಲ್ಲಿ ತಾಲೂಕಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆ

**■ ವಿಜಯಸಾಕ್ಷಿ ಸುದ್ದಿ, ಗದಗ**

2023-24ನೇ ಸಾಲಿನ ತಾಲೂಕ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳನ್ನು ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಶ್ರೀ ಮನೋಹರ ಅಮರಪ್ಪ ಇನಾಮತಿ ಪ್ರೌಢಶಾಲೆ ಕುರ್ತಕೋಟಿ ಇಲ್ಲಿ ಡಿಸೆಂಬರ್ 15 ರಂದು ಆಯೋಜಿಸಲಾಗಿದೆ.

ತಾಲೂಕಿನ ಎಲ್ಲಾ ಸರಕಾರಿ, ಅನುದಾನಿತ, ಅನುದಾನರಹಿತ ಶಾಲಾ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಗದಗ ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ವ್ಹಿ.ವ್ಹಿ.ನಡುವಿನಮನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿಧನ ವಾರ್ತೆ

## ದಾಧಾಬಾಯಿ ಯರಗುಡಿ

ಲಕ್ಕುಂಡಿ, ಇಲ್ಲಿಯ ತಾಡಪತ್ರಿ ಓಣಿಯ ನಿವಾಸಿ ಗ್ರಾ.ಪಂ ಮಾಜಿ ಸದಸ್ಯ, ಅಂಜುಮನ್ ಏ ಇಸ್ಲಾಂ ಕಮಿಟಿ ಸಂಸ್ಥಾಪಕ ಅಧ್ಯಕ್ಷ ದಾಧಾಬಾಯಿಗೌಸ್ ಮೋದಿನಸಾಬ ಯರಗುಡಿ(89) ಸೋಮವಾರ ನಿಧನರಾದರು.

ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗ ಅಗಲಿದ್ದಾರೆ.

## ಲಕ್ಷ್ಮವ್ವ ನಿಂಗಪ್ಪ ಗುಡ್ಡಣ್ಣವರ




ಲಕ್ಷ್ಮೇಶ್ವರ, ತಾಲೂಕಿನ ದೊಡ್ಡೂರು ಗ್ರಾಮದ ಲಕ್ಷ್ಮವ್ವ ನಿಂಗಪ್ಪ ಗುಡ್ಡಣ್ಣವರ(67) ಅವರು ಗುರುವಾರ ನಿಧನರಾದರು.

ಮೃತರಿಗೆ ಪತಿ, ಮೂವರು ಪುತ್ರರು ಸೇರಿ ಅಪಾರ ಬಂಧು-ಬಳಗವಿದೆ.

**ದೇವಸ್ಥಾನದ ಮಹಾದ್ವಾರ, ದೀಪಸ್ಥಂಭ ಉದ್ಘಾಟನಾ ಸಮಾರಂಭ ನಾಳೆ**

# ಶ್ರೀ ಪವಾಡ ಆಂಜನೇಯ ದೇವರ ಕಾರ್ತಿಕೋತ್ಸವ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಶ್ರೀ ವೀರಸೋಮೇಶ್ವರ ನಗರದ ದಲ್ಲಿರುವ ಶ್ರೀ ಪವಾಡ ಆಂಜನೇಯ (ಬಲಮುಖಿ) ದೇವಸ್ಥಾನದ ಮಹಾದ್ವಾರ, ದೀಪಸ್ಥಂಭ ಉದ್ಘಾಟನೆ ಹಾಗೂ 5ನೇ ವರ್ಷದ ಕಾರ್ತಿಕೋತ್ಸವ ಸಮಾರಂಭವು ಡಿ.16ರಂದು ಜರುಗಲಿದೆ.

ಅಂದು ಬೆಳಿಗ್ಗೆ 8 ಗಂಟೆಗೆ ಶ್ರೀ ಪವಾಡ ಆಂಜನೇಯ ಸ್ವಾಮಿ, ಶಿವಲಿಂಗ, ಗಣಪತಿ, ಸುಬ್ರಹ್ಮಣ್ಯ, ನಂದಿ, ನವಗ್ರಹ ಮೂರ್ತಿಗಳಿಗೆ ವಿಶೇಷ ಪೂಜೆ, ಸಂಜೆ 5 ಗಂಟೆಗೆ ಬಾಳೆಹೊನ್ನೂರಿನ ಶ್ರೀಮದ್ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳವರನ್ನು ಪುಟ್ಟರಾಜ ನಗರದಿಂದ (ಎಪಿಎಂಸಿ ದಕ್ಷಿಣ ಗೇಟ್) ಪೂರ್ಣಕುಂಭ ಹಾಗೂ ಮಂಗಲವಾದ್ಯಗಳೊಂದಿಗೆ ವೈಭವದಿಂದ ದೇವಸ್ಥಾನಕ್ಕೆ ಬರಮಾಡಿಕೊಳ್ಳಲಾಗುವುದು.

ರಂಭಾಪುರಿ ಜಗದ್ಗುರುಗಳ ಅಮೃತ ಹಸ್ತದಿಂದ, ಶಿವಾಚಾರ್ಯರ ಸಮ್ಮುಖದಲ್ಲಿ ಶ್ರೀ ಪವಾಡ ಆಂಜನೇಯ ದೇವಸ್ಥಾನದ ಮಹಾದ್ವಾರ ಹಾಗೂ ದೀಪಸ್ಥಂಭ ಲೋಕಾರ್ಪಣೆಗೊಳ್ಳುವುದು. ಸಂಜೆ 6 ಗಂಟೆಗೆ ಶ್ರೀ ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವಾತ್ಪಾದರ ಸಾನ್ನಿಧ್ಯದಲ್ಲಿ ಧರ್ಮಸಭೆ ಹಾಗೂ 5ನೇ ವರ್ಷದ ಕಾರ್ತಿಕೋತ್ಸವ ಜರುಗುವುದು. ನೇತೃತ್ವವನ್ನು ಶ್ರೀ ಷ. ಬ್ರ. ಡಾ. ಕೊಟ್ಟೂರ ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಜುಕ್ತಿ ಹಿರೇಮಠ ಸೂಡಿ-ಗದಗ, ಸಮ್ಮುಖವನ್ನು ಮುಕ್ತಿಮಂದಿರದ ಶ್ರೀ ಷ. ಬ್ರ. ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಷ. ಬ್ರ. ರೇವಣಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು ಅರಳೆಮಠ, ಶ್ರೀ ಷ. ಬ್ರ. ಡಾ. ಸುಜ್ಞಾನದೇವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಷ. ಬ್ರ. ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ವಹಿಸಿಕೊಳ್ಳುವರು. ವೇದಘೋಷವನ್ನು ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಬಾಳೆಹೊನ್ನೂರು ಇವರು ನಡೆಸಿಕೊಡುವರು. ಚಂದ್ರು ಬಾಳಿಹಳ್ಳಿಮಠ ಪ್ರಾಸ್ತಾವಿಕವಾಗಿ ಮಾತನಾಡುವರು.

ಅಧ್ಯಕ್ಷತೆಯನ್ನು ಶ್ರೀ ವೀರಸೋಮೇಶ್ವರ ನಗರ, ನಿಸರ್ಗ ಬಡಾವಣೆ ನಿವಾಸಿಗಳ ಹಿತರಕ್ಷಣಾ ಸಮಿತಿ ಅಧ್ಯಕ್ಷ ಶಿವಾನಂದಯ್ಯ ಹಿರೇಮಠ ವಹಿಸುವರು. ದಾನಿಗಳಿಗೆ, ಶಿಲ್ಪಿಗಳಿಗೆ, ಗುರುರಕ್ಷೆಯನ್ನು ನೀಡಿ ಗೌರವಿಸಲಾಗುವುದು. ಗಾನಭೂಷಣ ಶ್ರೀ ವೀರೇಶ ಕಿತೂರು ಮತ್ತು ಸಂಗಡಿಗರು ಭಕ್ತಿ ಸಂಗೀತ ಕಾರ್ಯಕ್ರಮ ನಡೆಸಿಕೊಡುವರು.

ಈ ಅಪೂರ್ವ ಸಮಾರಂಭದಲ್ಲಿ ಸರ್ವರೂ ಪಾಲ್ಗೊಂಡು ಪುನೀತರಾಗಲು ಶ್ರೀ ವೀರಸೋಮೇಶ್ವರ ನಗರ, ನಿಸರ್ಗ ಬಡಾವಣೆ ನಿವಾಸಿಗಳ ಹಿತರಕ್ಷಣಾ ಸಮಿತಿ ಗದಗ ಅಧ್ಯಕ್ಷರು ಹಾಗೂ ಸರ್ವ ಪದಾಧಿಕಾರಿಗಳು ಪತ್ರಿಕಾ ಪ್ರಕಟಣೆಯ ಮೂಲಕ ವಿನಂತಿಸಿದ್ದಾರೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಡಿ.ಆರ್. ಪಾಟೀಲ, ವಿ.ಪ ಸದಸ್ಯ ಎಸ್.ವ್ಹಿ. ಸಂಕನೂರ, ನಗರಸಭಾ ಸದಸ್ಯೆ ಪದ್ಮಾ ಕಟಗಿ, ಎಸ್‌ಆರ್‌ಎನ್ ಫೌಂಡೇಶನ್‌ನ ಎಸ್.ಆರ್. ನವಲಿಹಿರೇಮಠ, ಕೆ.ಎನ್. ಕಂಕಾಳೆ, ವೀರಪ್ಪ ಬ.ಬಿಸನಳ್ಳಿ, ಶರಣಬಸವರಾಜ, ಪಂಚಾಕ್ಷರಯ್ಯ ಜ. ಹಿರೇಮಠ, ಮಹಾಂತೇಶ ವಸ್ತ್ರದ, ಹರೀಶ ಎಚ್.ಕೊಪ್ಪರ ಭಾಗವಹಿಸುವರು.

## ಆಕಾಶವಾಣಿಯಲ್ಲಿ ನಾಟಕ ಪ್ರಸಾರ

■ವಿಜಯಸಾಕ್ಷಿ ಸುದ್ದಿ, ಗದಗ

ಕೆ.ಎಚ್. ಪಾಟೀಲ ಪ್ರತಿಷ್ಠಾನದ ಪ್ರಾಯೋಜಕತ್ವದಲ್ಲಿ ಜಗನ್ನಾಥ ಜಮಾದಾರ ಲಿಖಿತ, ಎ.ಎಸ್. ನಾಗರಳ್ಳಿ ಇವರಿಂದ ನಾಟಕಕ್ಕೆ ರೂಪಾಂತರಗೊಂಡ 'ಇದ್ದುದರಲ್ಲಿ ತೃಪ್ತಿಯಿಂದ ಇರಿ' ನಾಟಕ ಡಿ.16ರಂದು ಬೆಳಿಗ್ಗೆ 9 ಗಂಟೆಗೆ ಧಾರವಾಡ ಆಕಾಶವಾಣಿ ಕೇಂದ್ರದಿಂದ ಪ್ರಸಾರವಾಗಲಿದೆ. ಶ್ರೋತೃಗಳು, ಆಸಕ್ತರು, ಆಲಿಸಿ ಬೆಂಬಲಿಸಲು ಪ್ರಕಟಣೆಯಲ್ಲಿ ಕೋರಲಾಗಿದೆ.

**ಸಿದ್ದಲಿಂಗ ನಗರದ ಸರ್ಕಾರಿ ಪ್ರೌಢಶಾಲೆಗೆ ಸ್ವಚ್ಛತಾ ಪರಿಕರಗಳ ವಿತರಣೆ**


# ಸ್ವಚ್ಛತೆಯ ಅರಿವು ಶಾಲಾ ಹಂತದಿಂದಲೇ ಮೂಡಲಿ

■ವಿಜಯಸಾಕ್ಷಿ ಸುದ್ದಿ, ಗದಗ

ಸ್ವಚ್ಛ ಭಾರತ ಅಭಿಯಾನ ಯಶಸ್ವಿಯಾಗಬೇಕಾದರೆ ಶಾಲಾ ಹಂತದಿಂದಲೇ ಸ್ವಚ್ಛತೆಯ ಮಹತ್ವ ಹಾಗೂ ಅರಿವು ಮೂಡಿಸುವಂತಾಗಬೇಕು. ಅಂದಾಗ ಸುಂದರ ಸ್ವಚ್ಛ ಉತ್ತಮ ನೈಸರ್ಗಿಕ ವಾತಾವರಣ ಕಾಣಲು ಸಾಧ್ಯ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮುತ್ತಣ್ಣ ಎ.ರಡ್ಡೇರ್ ಅಭಿಪ್ರಾಯಪಟ್ಟರು.

ಅವರು ಇಲ್ಲಿನ ಸಿದ್ದಲಿಂಗ ನಗರದ ಸರ್ಕಾರಿ ಪ್ರೌಢಶಾಲೆಗೆ ದಿ. ಗಂಗಾಧರ ವಿಠೋಬಾ ವರ್ಣೇಕರ್ ಕುಟುಂಬವರ್ಗದವರು ಕೊಡಮಾಡಿದ ಸ್ವಚ್ಛತಾ ಪರಿಕರಗಳನ್ನು ವಿತರಿಸಿ ಮಾತನಾಡಿದರು.

ಶುಚಿತ್ವ ಕಾಪಾಡಿಕೊಳ್ಳದೇ ಹೋದರೆ ಅದು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಅದರಲ್ಲೂ ಉತ್ತಮ ಕಲಿಕೆಗೆ ಶಾಲಾ ಆವರಣ ಸುಂದರವಾಗಿ ಇರಬೇಕು. ಅಂದಾಗ ವಿದ್ಯಾರ್ಥಿಗಳು ನಿತ್ಯವೂ ಹುಮ್ಮಸ್ಸಿನಿಂದ ಪಾಠ ಕೇಳಲು ಸಾಧ್ಯ. ಶಿಕ್ಷಕರು ಕೂಡಾ ಪಾಠ ಮಾಡಲು ಒಳ್ಳೆಯ ವಾತಾವರಣ ಇದ್ದರೆ ಇನ್ನಷ್ಟು ಪರಿಣಾಮಕಾರಿಯಾಗಿ ಬೋಧಿಸಬಹುದು. ಅದಕ್ಕಾಗಿ ಶಾಲಾ ಆವರಣದಲ್ಲಿ ಸ್ವಚ್ಛತೆ ಅತ್ಯಗತ್ಯ. ವರ್ಣೇಕರ್ ಕುಟುಂಬವರ್ಗದವರು ಕೊಡಮಾಡಿದ ಸ್ವಚ್ಛತಾ ಪರಿಕರಗಳು ಈ ಶಾಲೆಯ ವಾತಾವರಣವನ್ನು ಸುಂದರವಾಗಿಡಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಈ ಪರಿಕರಗಳನ್ನು ಸದುಪಯೋಗಪಡಿಸಿಕೊಂಡು ಶಾಲಾ ಆವರಣ ಶುಚಿಯಾಗಿಡಬೇಕೆಂದು ಪ್ರತಿಜ್ಞಾವಿಧಿ ಬೋಧಿಸಿದರು.



ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಎ.ಎ. ಕಂಬಾಳಿಮಠ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ, ಸಭಾಪತಿ ಬಸವರಾಜ ಹೊರಟ್ಟಿಯವರು ಸರ್ಕಾರಿ ಶಾಲೆಯನ್ನು ದತ್ತು ಪಡೆಯುವ ಮೂಲಕ ಶಾಲೆಯ ಕಳೆಯೇ ಬದಲಾಗಿದೆ. ಖಾಸಗಿ ಶಾಲೆಯನ್ನು ಮೀರುವಂತೆ ಕೆಲವೇ ತಿಂಗಳಲ್ಲಿ ಬದಲಾಗಿದ್ದು ಖುಷಿ ತಂದಿದೆ ಎಂದರು.

ಡಾ.ಬಸವರಾಜ ಧಾರವಾಡ ಪ್ರಾಸ್ತಾವಿಕವಾಗಿ ಮಾತನಾಡಿ, ಸಭಾಪತಿ ಬಸವರಾಜ ಹೊರಟ್ಟಿಯವರ ಸಂಕಲ್ಪದಂತೆ ಈ ಶಾಲೆ ಕೆಲವೇ ದಿನಗಳಲ್ಲಿ ಅಭಿವೃದ್ಧಿ ಹೊಂದಿ ಎಲ್ಲ ಮೂಲಭೂತ ಸೌಕರ್ಯಗಳನ್ನು ಹೊಂದಿದೆ. ಇದಕ್ಕೆ ಕಾರಣೀಕರ್ತರಾದ ಹೊರಟ್ಟಿಯವರನ್ನು ಅಭಿನಂದಿಸುವುದಾಗಿ ಹೇಳಿದರು. ಇದೇ ಸಂದರ್ಭದಲ್ಲಿ ದಾನಿಗಳಾದ ಸುನೀಲ ವರ್ಣೇಕರ್ ಅವರನ್ನು ಶಾಲೆಯ ಪರವಾಗಿ ಗೌರವಿಸಲಾಯಿತು.

ಸರಕಾರಿ ಶಾಲೆಗಳ ಸಬಲೀಕರಣ ಮಾಡಬೇಕಾದರೆ ಸಮುದಾಯದ ಸಹಭಾಗಿತ್ವ ಅವಶ್ಯ. ಸಮಾಜದಲ್ಲಿ ಸಾಕಷ್ಟು ದಾನಿಗಳು ಇದ್ದಾರೆ. ಅವರ ಸಹಕಾರ ಪಡೆದುಕೊಂಡು ಸರ್ಕಾರಿ ಶಾಲೆಗಳನ್ನು ಇನ್ನಷ್ಟು ಸುಂದರ ಸುಭದ್ರವಾಗಿ ಕಟ್ಟಲು ಸಾಧ್ಯವಾಗುತ್ತದೆ. ಸುನೀಲ ವರ್ಣೇಕರ್ ಅವರು ಸರ್ಕಾರಿ ಶಾಲೆಗಳಿಗೆ ನೀಡಿದ ಸಹಾಯವನ್ನು ಶಿಕ್ಷಣ ಇಲಾಖೆ ಸದಾ ಸ್ಮರಿಸಿ ಗೌರವಿಸಿ ಅಭಿನಂದಿಸುತ್ತದೆ.

– ಮುತ್ತಣ್ಣ ಎ.ರಡ್ಡೇರ್.
ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.

ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಪಾರ್ವತಿ ವಸ್ತ್ರದ, ಎಸ್.ಆರ್. ಹನಮಗೌಡ್ರ, ಎಂ.ಪಿ. ಸಾಂಬ್ರಾಣಿ, ಎಸ್.ಬಿ. ಗುಳೇದವರ, ಎಸ್.ಎಂ. ಪತ್ತಾರ, ಎಸ್.ಎ. ಬಾಣದ, ಎಸ್.ಎ. ಗದ್ದನಕೇರಿ, ಎನ್.ಆರ್. ಶಿರೋಳ, ಎಸ್.ಯು. ಕುಷ್ಟಗಿ, ಜಿ.ಎನ್. ಅಳವಂಡಿ, ಪಿ.ವ್ಹಿ. ದಾಸರ, ಎಲ್.ಎಸ್. ಮಾಳೊತ್ತರ, ಎಸ್.ಎಸ್. ಗಾಳಿ, ಎಮ್.ಆಯ್. ಶಿವನಗೌಡ್ರ ಮುಂತಾದವರು ಉಪಸ್ಥಿತರಿದ್ದರು. ಸಂಜೀವಿನಿ ಜಿ.ಕುಲಗುಡಿ ಕಾರ್ಯಕ್ರಮ ನಿರೂಪಿಸಿದರು. ಜಯಲಕ್ಷ್ಮೀ ಬಿ.ಅಣ್ಣಿಗೇರಿ ವಂದಿಸಿದರು.

## ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಂಸದರ ಕಚೇರಿಯೆದುರು ಪ್ರತಿಭಟನೆ




■ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಭಾರತ ಗ್ರಾಮೀಣ ಅಂಚೆ ನೌಕರರ ಸಂಘ ಗದಗ ವಿಭಾಗದ ನೌಕರರು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದ ಹಾವೇರಿ ಸಂಸದರ ಕಚೇರಿಯ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ವಲಯದ ಸಹ ಕಾರ್ಯದರ್ಶಿ ಕಾಂ. ಎಂ.ಎನ್. ಕುರಹಟ್ಟಿ ಮಾತನಾಡಿ, ಕಮಲೇಶ ಚಂದ್ರ 7ನೇ ವೇತನ ವರದಿಯ ಕೆಲವು ಸೌಲಭ್ಯಗಳನ್ನು ಮಾತ್ರ ನಮಗೆ ಇಲಾಖೆ ಕೊಟ್ಟಿದೆ. ನಮ್ಮ ಹಲವಾರು ಬೇಡಿಕೆಗಳನ್ನು ಸರ್ಕಾರ ಈಡೇರಿಸಿಲ್ಲ. ನಮ್ಮ ಬೇಡಿಕೆಗಳಾದ 8 ಗಂಟೆಗಳ ಕೆಲಸ ನೀಡುವುದು ಮತ್ತು ಪಿಂಚಣಿ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ನೀಡುವುದು, ಸೇವಾ ಹಿರಿತನದ ಆಧಾರದ ಮೇಲೆ 12/24/36 ಸೇವೆ ಸಲ್ಲಿಸಿದ ಜಿಡಿಎಸ್ ನೌಕರರಿಗೆ ವಿಶೇಷ ಇಂಕ್ರಿಮೆಂಟ್ ನೀಡುವುದು, ಅವೈಜ್ಞಾನಿಕ ಗುರಿ ನೀಡಿ ಮೇಳಗಳನ್ನು ನಡೆಸುತ್ತಿರುವುದನ್ನು ನಿಲ್ಲಿಸುವುದು, ಗ್ರುಪ್ ಇನ್ಸುರೆನ್ಸ್ ಕವರೇಜ್ ರೂ. 5 ಲಕ್ಷದವರೆಗೆ ಹೆಚ್ಚಿಸುವುದು, 180 ದಿನಗಳ ರಜೆ ಉಳಿಸಿಕೊಳ್ಳಲು ಅವಕಾಶ ಕಲ್ಪಿಸುವುದು, ಜೆ.ಡಿ.ಎಸ್. ಮತ್ತು ಅವರ ಕುಟುಂಬದ ಸದಸ್ಯರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದು ಮುಂತಾದಗಳನ್ನು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿ.ಆರ್. ಕುರಹಟ್ಟಿ, ಬಿ.ಎಫ್. ಹಡಪದ, ಪಿ.ವಿ. ಇಟ್ಟಂಗಿ, ಹೆಚ್. ಎಂ. ಉದ್ದಾರ, ಉಮೇಶ ಮೇಳಣ್ಣವರ, ಎಂ.ಆರ್. ಬರದೂರ, ಎಸ್.ಬಿ. ತಡಸಿ, ಪ್ರವೀಣಾ ಚವ್ಹಾಣ, ಮಹೇಶ ಅರಹುಣಸಿ, ಬಸವರಾಜ ನಡೇದ, ಮಹಾಂತೇಶ ಅಂಗಡಿ, ಎ.ಡಿ. ಕೊಪ್ಪದ, ಅಶ್ವಿನಿ ಕುಲಕರ್ಣಿ, ರೇಣುಕಾ ಹಳೇಮ್ಮನವರ, ವಿನಾಯಕ ಅಚಲಕರ ಸೇರಿದಂತೆ ಜಿಲ್ಲಾ ಗ್ರಾಮೀಣ ಅಂಚೆ ನೌಕರರು ಉಪಸ್ಥಿತರಿದ್ದರು.

## ಜಾತ್ರೆ, ಉತ್ಸವ ಆಚರಣೆಗಳಿಂದ ಉತ್ತಮ ಸಮಾಜ ನಿರ್ಮಾಣ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಈ ಜಗತ್ತಿನಲ್ಲಿ ಇರುವುದು ಐದೇ ದೇವರು. ಅವುಗಳನ್ನೇ ವಿವಿಧ ಹೆಸರುಗಳಿಂದ ಕರೆದು ನಾವು ಪೂಜಿಸುತ್ತಿದ್ದೇವೆ. ಶಂಕರ, ನಾರಾಯಣ, ರವಿ, ಗಣಪತಿ ಮತ್ತು ದೇವಿ ಎಂಬ ಐದು ದೇವತೆಗಳೇ ವಿವಿಧ ನಾಮಗಳಿಂದ ಪೂಜಿಸಲ್ಪಡುತ್ತಿವೆ ಎಂದು ಸೂಡಿಯ ನಿವೃತ್ತ ಪ್ರಾಚಾರ್ಯ ವೇ.ಬ್ರ. ಗಣಪತಿಭಟ್ಟ ಜೋಷಿ ಹೇಳಿದರು.

ಪಟ್ಟಣದಲ್ಲಿ ನಡೆದಿರುವ ಶ್ರೀ ಗ್ರಾಮ ದೇವತಾ ದೇವಸ್ಥಾನದ ಕಳಸಾರೋಹಣದ ಸಭೆಯಲ್ಲಿ ಅವರು ಮಾತನಾಡಿದರು.

ನಮ್ಮ ಮನಸ್ಸಿನ ಶಾಂತಿ-ನೆಮ್ಮದಿಗಳನ್ನು ಹಾಳು ಮಾಡಿಕೊಳ್ಳದೆ ಇರಲು ನಮಗೆ ಪೂಜೆ, ಪುನಸ್ಕಾರ, ಹೋಮ-ಹವನ, ಜಾತ್ರೆಗಳು ಸಹಾಯ ಮಾಡುತ್ತವೆ. ಇವುಗಳ ಆಚರಣೆಯಿಂದ ನಮ್ಮೆಲ್ಲರ ಮನಸ್ಸಿಗೆ ಸಮಾಧಾನ ಸಿಗುವುದರ ಜೊತೆಗೆ ನಾವೆಲ್ಲ ಒಂದು ಎಂಬ ಭಾವನೆ ಎಲ್ಲರಲ್ಲಿಯೂ ಮೂಡುತ್ತದೆ ಎಂದು ಹೇಳಿದರು.



ಮಾನವರಲ್ಲಿ ಉತ್ತಮ ಮನುಷ್ಯ ಮತ್ತು ಕೆಟ್ಟ ಮನುಷ್ಯ ಎಂದು ಎರಡು ಬಗೆಗಳಿವೆ. ಸದಾಕಾಲ ಒಳ್ಳೆಯದನ್ನು ಬಯಸುತ್ತ, ಸಮಾಜದೊಂದಿಗೆ ಬೆರೆತು ತನ್ನ ಇರುವಿಕೆಯನ್ನು ವ್ಯಕ್ತಪಡಿಸುತ್ತಾನೆಯೋ ಆತ ಉತ್ತಮ ಮಾನವ. ಯಾವನು ಇನ್ನೊಬ್ಬರಿಗೆ ಸದಾಕಾಲ ಪೀಡೆ ಮತ್ತು ಕಂಟಕ ನೀಡುತ್ತಾನೆಯೋ ಅವನು ಕೆಟ್ಟ ಮನುಷ್ಯ. ಇಂತಹ ಜಾತ್ರೆ, ಉತ್ಸವ ಆಚರಣೆಗಳ ಮೂಲಕ ನಾವೆಲ್ಲರೂ ಉತ್ತಮ ಮಾನವರಾಗಲು ಪ್ರಯತ್ನಿಸಬೇಕೆಂದು ಗಣಪತಿಭಟ್ಟರು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಡಾ. ಆರ್.ಕೆ. ಗಚ್ಚಿನಮಠ ಮಾತನಾಡಿ ನಾವೆಲ್ಲರೂ ಒಮ್ಮನದಿಂದ ಜಾತ್ರೆ, ಉತ್ಸವಗಳನ್ನು ಆಚರಿಸಿದರೆ ಅದಕ್ಕೊಂದು ಅರ್ಥ ಬರುತ್ತದೆ. ಅಂತಹ ವಾತಾವರಣ ನಮ್ಮ ನರೇಗಲ್ಲದಲ್ಲಿರುವುದು ನಮ್ಮ ಸೌಭಾಗ್ಯ ಎಂದರು.

ವೇದಿಕೆಯ ಮೇಲೆ ನಿವೃತ್ತ ಪ್ರಾಚಾರ್ಯೆ ಕವಿತಾ ಕಾಶಪ್ಪನವರ ಉಪಸ್ಥಿತರಿದ್ದರು. ಎಸ್‌ಎವಿವಿಪಿ ಸಮಿತಿಯ ಕಿವುಡ ಮಕ್ಕಳ ಶಾಲೆಯ ವಿದ್ಯಾರ್ಥಿಗಳು ವಚನ ನೃತ್ಯ ಪ್ರಸ್ತುತಪಡಿಸಿದರು. ಆನಂದ ಕೊಟಗಿ ಸ್ವಾಗತಿಸಿದರು. ಬಿ.ಬಿ. ಕುರಿ ನಿರೂಪಿಸಿದರು. ಅರುಣ ಬಿ.ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಂ.ಕೆ. ಬೇವಿನಕಟ್ಟಿ ವಂದಿಸಿದರು.

## ಸುವರ್ಣ ವಿಧಾನಸೌಧದ ಬಳಿ ಗುತ್ತಿಗೆದಾರರ ಪ್ರತಿಭಟನೆ



■ವಿಜಯಸಾಕ್ಷಿ ಸುದ್ದಿ, ಬೆಳಗಾವಿ

ಸರ್ಕಾರ ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿಗಳ ಬಿಲ್‌ಗಳು ಕಳೆದ ಹಲವಾರು ವರ್ಷಗಳಿಂದ ಪಾವತಿಯಾಗದೇ ಜಿಲ್ಲೆಯ ಗುತ್ತಿಗೆದಾರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಗುತ್ತಿಗೆದಾರರ ಆತ್ಮಹತ್ಯೆಗಳೂ ನಡೆಯುತ್ತಿವೆ. ಆದ್ದರಿಂದ, ಪೂರ್ಣಗೊಂಡ ಕಾಮಗಾರಿಗಳ ಬಿಲ್ ಪಾವತಿಸುವುದು, ಹೆಚ್ಚುವರಿಯಾದ ಶೇ. 6ರಷ್ಟು ಜಿಎಸ್‌ಟಿಯನ್ನು ಸರ್ಕಾರವೇ ಭರಿಸುವುದು, ಶೀಘ್ರವೇ ಅನುದನಾದ ಬಿಡುಗಡೆ ಮಾಡುವುದು ಸೇರಿದಂತೆ ಇನ್ನಿತರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಗುರುವಾರ ಬೆಳಗಾವಿ ಜಿಲ್ಲಾ ಕಾರ್ಯನಿರತ ಗುತ್ತಿಗೆದಾರರ ಸಂಘದ ನೇತೃತ್ವದಲ್ಲಿ ಇಲ್ಲಿನ ಸುವರ್ಣ ವಿಧಾನ ಸೌಧದ ಬಳಿ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನಾನಿರತರನ್ನು ಉದ್ದೇಶಿಸಿ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಕೆಂಪಣ್ಣ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೂ ಓರ್ವ ಗುತ್ತಿಗೆದಾರ ಆತ್ಮಹತ್ಯೆಗೆ ಶರಣಾಗಿದ್ದಾರೆ. ಹೀಗಾಗಿ, ಸಂಘದ ಬೇಡಿಕೆಗಳು ಈಡೇರುವವರೆಗೂ ಹೋರಾಟ ನಿರಂತರವಾಗಿ ನಡೆಯುತ್ತದೆ. ಸರ್ಕಾರ ಬಂದು 8 ತಿಂಗಳುಗಳಾದರೂ ಕೆಲಸಗಳು ಆರಂಭಗೊಂಡಿಲ್ಲ ಎಂದು ಆರೋಪಿಸಿದರು.

ನಮ್ಮ ಸಂಘದ ಬೇಡಿಕೆಗಳು ಈಡೇರುವವರೆಗೂ ಹೋರಾಟವನ್ನು ಮುಂದುವರೆಸುತ್ತೇವೆ. ಈಗ ಬೆಳಗಾವಿಯಲ್ಲಿ ಆಗಿದೆ. ಮುಂದೆ ಕಲಬುರ್ಗಿ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ವಿವಿಧೆಡೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರಲ್ಲದೆ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಲಿ ಎಂದು ಕೆಂಪಣ್ಣ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷ ಬಸವರಾಜ ಮಟಗಾರ, ಆರ್.ಡಿ. ಪದ್ಮಣ್ಣವರ್,

ಎಸ್.ಆರ್. ಗುಳ್ಳಪ್ಪನವರ, ಎಸ್.ಸಿ. ಗುಡಸಿ, ಸಿ.ಎಂ. ಜಾನ್ ಮುಂತಾದವರಿದ್ದರು.

## ಶಂಕ್ರಪ್ಪ ಅಂಗಡಿಯವರ ಸ್ಮರಣೋತ್ಸವ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ



ಶಹರದ ಸಿದ್ರಾಮೇಶ್ವರ ನಗರದ, ಕೆಎಸ್‌ಆರ್‌ಟಿಸಿ ಡಿಪೋ ಹಿಂದುಗಡೆ, ಹೂಗಾರ ಪ್ಲಾಟಿನಲ್ಲಿರುವ ಶರಣೆ ಲಕ್ಷ್ಮೀ ಶಂಕ್ರಪ್ಪ ಅಂಗಡಿ ಇವರ ಮನೆಯಲ್ಲಿ ಶುಕ್ರವಾರ ಬೆಳಿಗ್ಗೆ 11ಕ್ಕೆ ನರಗೇಲ್ಲದ ಸಮುದಾಯ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಲಿಂಗೈಕ್ಯ ಶಂಕ್ರಪ್ಪ ಅಂಗಡಿ ಇವರ ಸ್ಮರಣೋತ್ಸವ ಜರುಗಲಿದೆ.

ಅಧ್ಯಕ್ಷತೆಯನ್ನು ಬಸವದಳದ ಅಧ್ಯಕ್ಷ ಶರಣ ವಿ.ಕೆ. ಕರೇಗೌಡ್ರ ವಹಿಸುವರು. ವೆಂಕಟಾಪೂರ ಶರಣರು, ಅನುಭಾವಿಗಳು ಶಿರಗುಪ್ಪ ಇವರು ಸ್ಮರಣೋತ್ಸವ ಕುರಿತು ಉಪನ್ಯಾಸ ಮಾಡುವರು. ಬಸವದಳದ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

## ಡಸ್ಟ್‌ಬಿನ್‌ನಲ್ಲಿ ಹೆಣ್ಣು ಭ್ರೂಣ ಪತ್ತೆ: ಆಸ್ಪತ್ರೆ ಸೀಲ್, ನಾಲ್ವರು ನೌಕರರ ಬಂಧನ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಖಾಸಗಿ ಆಸ್ಪತ್ರೆಯೊಂದರ ಆವರಣದ ಕಸದ ತೊಟ್ಟಿಯಲ್ಲಿ ಹೆಣ್ಣು ಭ್ರೂಣ ಪತ್ತೆಯಾದ ಹಿನ್ನೆಲೆಯಲ್ಲಿ ಆಸ್ಪತ್ರೆ ಸೀಲ್ ಮಾಡಲಾಗಿದ್ದು, ನಾಲ್ವರು ನೌಕರರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಹೊಸಕೋಟೆ ತಾಲೂಕಿನ ತಿರುಮಲಶೆಟ್ಟಿಹಳ್ಳಿಯ ಆಸ್ಪತ್ರೆಯಲ್ಲಿ ನಡೆದ ಘಟನೆಯ ಬೆನ್ನಲ್ಲೇ ಅದರ ಮಾಲೀಕರೂ ಆದ ವೈದ್ಯರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಶರಣರ ಅನುಭಾವದಿಂದ ಮನದ ಮೈಲಿಗೆ ದೂರ



■ವಿಜಯಸಾಕ್ಷಿ ಸುದ್ದಿ, ಗದಗ

ಮಾನವನ ಮನದ ಮೈಲಿಗೆ ತೊಳೆಯಬೇಕಾದರೆ ಶರಣರ ಅನುಭಾದ ಅಮೃತವಾಣಿ ಆಲಿಸಿ, ಅರಗಿಸಿ, ಅಳವಡಿಸಿಕೊಳ್ಳಬೇಕು. ಸಮಾಜಕ್ಕಾಗಿ, ಧರ್ಮಕ್ಕಾಗಿ ಸೇವೆ ಮಾಡಿದವರ ಹೆಸರು ಅಮರವಾಗುತ್ತದೆ ಎಂದು ಬಳಗಾನೂರಿನ ಪೂಜ್ಯ ಶಿವಶಾಂತವೀರ ಶರಣರು ಆಶೀರ್ವಚನ ನೀಡಿದರು.

ಹುಲಕೋಟಿಯ ಬೀರದೇವರ ದೇವಸ್ಥಾನದಲ್ಲಿ 13ನೇ ವರ್ಷದ ಕಾರ್ತಿಕೋತ್ಸವ, 136ನೇ ಕನಕದಾಸರ ಜಯಂತ್ಯುತ್ಸವ ಹಾಗೂ 10ನೇ ವರ್ಷದ ಹಾಲುಮತ ಪುರಾಣ ಪ್ರವಚನದ ಮಂಗಲೋತ್ಸವ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಡಾ. ಶರಣಬಸವ ವೆಂಕಟಾಪೂರ ಉಪನ್ಯಾಸ ನೀಡಿ, ದೇವತಾ ಮನುಷ್ಯರಾಗಲುಸಾಧನೆ ಸಾಹಸ, ಸಂಯಮ ಬೇಕು. ಕಷ್ಟಗಳನ್ನು ಸವಾಲನ್ನಾಗಿಸಿಕೊಂಡು ಜೀವನ ನಡೆಸಬೇಕು. ನಾನು ಎಂಬುದನ್ನು ಅಳಿದರೆ ವೈಕುಂಠಕ್ಕೆ ಹೋಗಬಹುದು ಎಂದರು.

ಗ್ರಾಮ ಹಿತಾಭಿವೃದ್ಧಿ ಸಂಘದ ಅಧ್ಯಕ್ಷ ಪಿ.ಕೆ. ಪಾಟೀಲರು ಕಾರ್ತಿಕೋತ್ಸವವನ್ನು ಉದ್ಘಾಟಿಸಿದರು. ವ್ಯವಸಾಯ ಸೇವಾ ಸಂಘದ ಅಧ್ಯಕ್ಷ ಚಂದ್ರಪ್ಪ ಕರಿಕಟ್ಟಿ, ತಾ.ಪಂ ಮಾಜಿ ಅಧ್ಯಕ್ಷ ಮೋಹನ ದುರಗಣ್ಣವರ, ಗ್ರಾ.ಪಂ ಅಧ್ಯಕ್ಷೆ ನಾಗರತ್ನ ಬಾಳಿಹಳ್ಳಿಮಠ, ಉಪಾಧ್ಯಕ್ಷ ಅಬ್ದುಲ್ ಕರಿಂಸಾಬ ತಹಸೀಲ್ದಾರ, ಸದಸ್ಯರಾದ ಎಂ.ಜಿ. ಹುಬ್ಬಳ್ಳಿ, ಶ್ರೀದೇವಿ ಕೋರಿ, ಜಿ.ಕೆ. ನಿಂಬನಾಯ್ಕರ, ಬಿ.ಎಸ್. ಬ್ಯಾಡಗಿ, ಜಿ.ಆರ್. ಓದುಗೌಡರ, ಯಲ್ಲಪ್ಪ ಹೊನ್ನಿನಾಯ್ಕರ, ಯೋಗಸಾಧಕಿ ಸರಸ್ವತಿ ಕೊಂಡಿಕೊಪ್ಪ ಮೊದಲಾದವರು ಹಾಜರಿದದರು.

ಫಕ್ಕೀರಯ್ಯ ಅಮೋಘಿಮಠ ಪುರಾಣ ಪ್ರವಚನ ಮಾಡಿದರು. ಧರ್ಮರಾಜ ಪಾಟೀಲ, ರುದ್ರೇಶ ನಾವಳ್ಳಿ ಪ್ರಾರ್ಥಿಸಿದರು. ಮೋಹನ ದುರಗಣ್ಣವರ ಸ್ವಾಗತಿಸಿದರು. ಎ.ವಿ. ಪ್ರಭು ನಿರೂಪಿದರು. ಪಾಂಡು ಹೊನ್ನಿನಾಯ್ಕರ ವಂದಿಸಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka